ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 7 | ಫೆಬ್ರವರಿ 15, 1981 | ಬೆಲೆ : 50 ಪೈಸೆ

ದೇಶದ್ರೋಹಿಗಳು ಯಾರು?

1,20,000 ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರವು ಈಗ ಹೊಸ ಘಟ್ಟವನ್ನು ಮುಟ್ಟಿದೆ. ಬೆಂಗಳೂರಲ್ಲೂ, ದಿಲ್ಲಿಯಲ್ಲೂ ನಡೆದ ಮಾತುಕತೆಗಳೆಲ್ಲಾ ವಿಫಲಗೊಂಡು ಮುಷ್ಕರವನ್ನು ತೀವ್ರಗೊಳಿಸಲು ಕಾರ್ಮಿಕ ನಾಯಕರು ತೀರ್ಮಾನ ತೆಗೆದುಕೊಂಡಿದ್ದಾರೆ. ಇನ್ನೊಂದು ಕಡೆ ಎಲ್ಲ ಮ್ಯಾನೇಜ್‌ಮೆಂಟಿನವರೂ ಸೇರಿ ಹೊರಡಿಸಿದ ಸಂಯುಕ್ತ ಹೇಳಿಕೆಯಲ್ಲಿ ಕಾರ್ಮಿಕರು ಸರ್ಕಾರದ ಸಲಹೆಯನ್ನು ಒಪ್ಪಬೇಕೆಂದೂ ತಾ. 12ರಿಂದ ಕೆಲಸಕ್ಕೆ ಹಾಜರಾಗಬೇಕೆಂದೂ ಕರೆ ನೀಡಿವೆ. ಇಷ್ಟು ದಿವಸ ಶಾಂತ ರೀತಿಯಲ್ಲಿ ನಡೆಯುತ್ತಿದ್ದ ಹೋರಾಟಕ್ಕೆ ಸರ್ಕಾರವು ಸವಾಲನ್ನು ಕೊಟ್ಟು ಸಂಘಗಳ ತೀರ್ಮಾನಗಳನ್ನು ಧಿಕ್ಕರಿಸಲು ಕರೆ ಕೊಟ್ಟಂತಾಗಿದೆ.

ಇದರಲ್ಲಿ ಕೇಂದ್ರಸರ್ಕಾರದ ಸಂಪರ್ಕ ಶಾಖೆಯ ಮಂತ್ರಿ ಶ್ರೀ ಸ್ಟೀಫನ್‌ರವರ ಕೈವಾಡ ಸ್ಪಷ್ಟವಾಗಿದೆ. 1970ರಲ್ಲಿ ಆದ ಒಪ್ಪಂದದಂತೆ ಈ ಕಾರ್ಮಿಕರಿಗೆ ದೊರೆಯಬೇಕಾದ ಅಧಿಕ ಸಂಬಳದ ಮೊತ್ತದ ಬಗ್ಗೆ ಪರಿಶೀಲನೆಯನ್ನೇ ಮಾಡದೆ, ಅವರಿಗೇನೂ ಕೇಳುವ ಹಕ್ಕಿಲ್ಲವೆಂದು ಮೊದಲು ಹೇಳಿಕೆಕೊಟ್ಟರು. ಆಮೇಲೆ ತಿಂಗಳಿಗೆ ರೂ. 20 ಕೊಡು

ಸಂಪಾದಕೀಯ

ತ್ತೇವೆಂದು ಪ್ರಕಟಿಸಿದರು. ಇದೇ ಕೊನೆಯದೆಂದು ಹೇಳಿದ ನಾಲ್ಕು ದಿನಗಳ ನಂತರ ಅದನ್ನು ರೂ. 25ಕ್ಕೂ ಮತ್ತು ಹಿಂದಿನ ಬಾಕಿಗೆ ಒಟ್ಟು ರೂ. 600 ಕೊಡುವದಾಗಿಯೂ ಹೇಳಿದರು. ಇದನ್ನೂ ಕಾರ್ಮಿಕರು ತಿರಸ್ಕರಿಸಿದಾಗ ಎಲ್ಲ ನಾಯಕರನ್ನು ದಿಲ್ಲಿಗೆ ಕರೆದು ಮಾತುಕತೆಯ ನಾಟಕ ನಡೆಯಿತು. ಅದೂ ವಿಫಲಗೊಂಡಾಗ ಈಗ ಪುನಃ ಬೆಂಗಳೂರಿಗೆ ಬಂದು ಈ ಮುಷ್ಕರವು "ರಾಜಕೀಯ ಪ್ರೇರಿತ"ವಾದುದೆಂದೂ, ಇದನ್ನು ನಡೆಸುವವರು "ರಾಷ್ಟ್ರದ್ರೋಹಿ"ಗಳೆಂದೂ ಕರೆದಿದ್ದಾರೆ. ಇದು ಗಂಭೀರವಾದ ಅರೋಪವಾಗಿದ್ದು ಇದು ಎಲ್ಲ ಕಾರ್ಮಿಕ ನಾಯಕರಿಗೂ ಒಂದು ಸವಾಲಾಗಿದೆ. ಹಿಂದೆ ಕಾನೂನು ಬದ್ಧವಾಗಿ ಮಾಡಿಕೊಂಡ ಒಪ್ಪಂದವನ್ನು ಜ್ಯಾರಿಗೊಳಿಸಿರೆಂದು ಕೇಳುವುದು ರಾಷ್ಟ್ರದ್ರೋಹವೆಂದು ಪರಿಗಣಿಸಲ್ಪಡುವುದಾದರೆ ಕಾರ್ಮಿಕ ಚಳುವಳಿಯನ್ನೇ ಅಲ್ಲಗಳೆದಂತಾಗುತ್ತದೆ. ಕೇಂದ್ರ ಮಂತ್ರಿಯ ಈ ಬೇಜವಾಬ್ದಾರಿ ಹೇಳಿಕೆಗಳು ಸಾರ್ವತ್ರಿಕವಾಗಿ ಖಂಡಿಸಲ್ಪಟ್ಟಿವೆ. ಇದು ಮಂತ್ರಿಯಾದವನಿಗೆ ಯೋಗ್ಯವಾದುದಲ್ಲ. ಬಿಕ್ಕಟ್ಟನ್ನು ಬಗೆಹರಿಸುವ ಕ್ರಮವೂ ಇದಲ್ಲ. ಈ ಹೇಳಿಕೆಗಳು ಮುಂಬರುವ ದಬ್ಬಾಳಿಕೆಗೆ ಪೂರ್ವ ಪೀಠಿಕೆಯೇ ಎಂಬ ಸಂಶಯಕ್ಕೆಡೆಕೊಟ್ಟಿದೆ. ಸರಕಾರವು ಈ ಧೋರಣೆಯನ್ನು ಬದಲಿಸಿ ಕಾರ್ಮಿಕಸಂಘಗಳ ಜೊತೆಗೆ ಮಾತುಕತೆ ನಡೆಸಿ ತೃಪ್ತಿಕರವಾದ ಒಪ್ಪಂದಕ್ಕೆ ಬಂದು ಮುಷ್ಕರವನ್ನು ಅಂತ್ಯಗೊಳಿಸಲು ಮುಂಬರಲೆಂದು ಹಾರೈಸುತ್ತೇವೆ.





"ಎಲ್ಲಿಂದ ಬಂದಿರೆಂದು ಕೇಳಬಹುದು ನೀವು ಜನರ ನಡುವಿನಿಂದ ಎಂದು ಹೇಳತೇವಿ ನಾವು"

(ಆಳುವವರ ತುಳಿತಕ್ಕೆ ಸಿಕ್ಕಿ ನುಜ್ಜುಗುಜ್ಜಾಗಿದ್ದ ರೈತ ಸಿಡಿದೆದ್ದು ವ್ಯಾಪಕ ಸಂಘಟನೆಗೆ ಮನಕೊಟ್ಟು ಹೋರಾಟದಕಣದಲ್ಲಿ ಧುಮುಕಿದ್ದಾನೆ. ೧೯೮೦ರ ಜುಲೈ ೨೧ರಂದು ನರಗುಂದ-ನವಲಗುಂದದಲ್ಲಿ ನಡೆದ ಗೋಲಿಬಾರ್‌ನಲ್ಲಿ ಹುತಾತ್ಮರಾದ ಬಾಂಧವರ ಸ್ಮರಣೆಗಾಗಿ "ಹುತಾತ್ಮ ಜ್ಯೋತಿಯನ್ನು" ಹಿಡಿದು, ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸುತ್ತ ಜನವರಿ ೧೬ ರಿಂದ ಕಾಲ್ನಡಿಗೆಯಿಂದ ಆರಂಭವಾದ "ಮಹಾಯಾತ್ರೆ" ಫೆಬ್ರವರಿ ೫ ರಂದು ರಾಜಧಾನಿಗೆ ತಲುಪಿತು. ಅವಿರ್ಭವಿಸಿದ ನೂತನ ಶಕ್ತಿಯ ಪ್ರತೀಕವಾಗಿ ರಾಜಧಾನಿಯ ಬೀದಿಗಳಲ್ಲಿ ಉಕ್ಕಿಹರಿದ ಜನಸಾಗರಕ್ಕೆ ಬೆಂಗಳೂರಿನ ಜನತೆ ತುಂಬುಹೃದಯದ ಸ್ವಾಗತ ನೀಡಿತು. ನೂರಾರು ಮೈಲು ದೂರದಿಂದ ಕಾಲ್ನಡಿಗೆಯಿಂದ ಆಗಮಿಸಿದ ರೈತ ಬಾಂಧವರು ತನ್ನ ಸೋದರ ವರ್ಗವಾದ ಕಾರ್ಮಿಕರೊಂದಿಗೆ ಸಂಗನುವಾಗಿ ಮುನ್ನಡೆದ ದೃಶ್ಯ ಕರ್ನಾಟಕದ ಇತಿಹಾಸದಲ್ಲೇ ಅಪೂರ್ವವಾದುದು)

(ವಿವರವಾದ ವರದಿ 3ನೇ ಪುಟದಲ್ಲಿ)

ಸಂಕ್ಷಿಪ್ತ ಸಮಾಚಾರಗಳು :

ಸಕಲೇಶಪುರ :

ದಿನಾಂಕ 26-1-81ರಂದು, ಕರ್ನಾಟಕ ತೋಟಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು ಸಕಲೇಶಪುರದ ಪಕ್ಕದ ಬಿಸ್ಲೂರು ತೋಟದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿ. ನಂಜುಂಡಪ್ಪ ವಹಿಸಿದ್ದರು.

ಆರಂಭದಲ್ಲಿ, ಕಾಂ. ಎಸ್. ವೆಂಕಟ್ರಾಂ, ಕಾಂ. ಜಿ. ವಿ. ಪವಾರ್ ಮತ್ತು ಹರಿಹರದ ಕಾಂ. ಸೀತಾಪತಿ ಇವರ ನಿಧನದ ಬಗ್ಗೆ ಸಂತಾಪ ವ್ಯಕ್ತಪಡಿಸಲಾಯಿತು. ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತು.

ರಾಜ್ಯಸರ್ಕಾರದ ಕಾರ್ಮಿಕ ಜನವಿರೋಧಿ ನೀತಿಯನ್ನು ಪ್ರತಿಭಟಿಸಲು ಸಿ.ಐ.ಟಿ.ಯು. ರಾಜ್ಯಸಮಿತಿ ಕೊಟ್ಟಿರುವ ಕರೆಯಂತೆ ದಿನಾಂಕ 29-1-81ರಂದು ರಾತ್ರಿ ಸಕಲೇಶಪುರದಲ್ಲಿ ಪಂಜಿನ ಮೆರವಣಿಗೆ ಹೊರಡಿಸಲಾಗಿತ್ತು. ಮೆರವಣಿಗೆಯ ನೇತೃತ್ವವನ್ನು ಕಾಂ. ವಿ. ಸುಕುಮಾರ್ ಮತ್ತು ಕಾಂ. ಪಾಲ್ ವಹಿಸಿದ್ದರು.

ರಾಣಿಬೆನ್ನೂರು :

ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದ ಬಡಪಾಯಿಗಳ ಗುಡಿಸಲುಗಳನ್ನು ರಾಣಿಬೆನ್ನೂರಿನ ಮುನಿಸಿಪಲ್ ಚೀಫ್ ಆಫೀಸರ ಆಜ್ಞೆಯ ಮೇರೆಗೆ 28-1-81ರಂದು ಬೆಳಿಗ್ಗೆ ನಾಶಪಡಿಸಲಾಗಿದೆ. ಯಾವುದೇ ಸೂಚನೆ ಕೊಡದೇ ಏಕಾಏಕಿ ಗುಡಿಸಲು ನಾಶಪಡಿಸಿದ್ದರಿಂದಾಗಿ ಕೂಲಿಕಾರರು ಬೀದಿಪಾಲಾಗಿದ್ದಾರೆ.

ಮನೆಕಳೆದುಕೊಂಡವರಿಗೆ ವಸತಿ ಹಾಗೂ ಪರಿಹಾರ ಕೊಡುವ ಬೇಡಿಕೆ ಮುಂದಿಟ್ಟು ರಾಣಿಬೆನ್ನೂರಿನ ಮುನಿಸಿಪಲ್ ಆಫೀಸಿನ ಎದುರು ಧರಣಿ ಸತ್ಯಾಗ್ರಹ ನಡೆಯುತ್ತಿದೆ.

ಕುಂದಾಪುರ :

ಸಿ.ಐ.ಟಿ.ಯು. ರಾಜ್ಯಸಮಿತಿಯ ಕರೆಯ ಮೇರೆಗೆ 29-1-81ರಂದು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ನ್ಯಾಯಯುತ ಮುಷ್ಕರ ಬೆಂಬಲಿಸಿ ಹಾಗೂ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಕುಂದಾಪುರದಲ್ಲಿ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಭೆ ನಡೆಯಿತು.

ಶಾಸ್ತ್ರಿ ಪಾರ್ಕಿನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ, ದ. ಕ. ಜಿಲ್ಲಾ ಸಿ.ಐ.ಟಿ.ಯು.ವಿನ ಸಹ ಕಾರ್ಯದರ್ಶಿ ಕಾಂ. ಶಂಕರ್, ಜಿಲ್ಲಾ ಹಂಚಿನ ಮಜೂರರ ಸಂಘದ ಉಪಾಧ್ಯಕ್ಷ ಕಾಂ. ಅಬ್ರಹಾಂ ಕರ್ಕಡ ಮತ್ತು ಕಾಂ. ಸಿ. ನಾರಾಯಣ ಮಾತನಾಡಿದರು.

ಗುಲಬರ್ಗಾ :

ದಿನಾಂಕ 1-2-81ರಂದು ಗುಲಬರ್ಗಾ ಮಹಿಳಾ ವಿಮೋಚನಾ ಸಂಘಟನಾ ಸಮಿತಿಯು, "ಮಹಿಳೆ ಮತ್ತು ಬೆಲೆಏರಿಕೆ" ಎನ್ನುವ ವಿಷಯ ಕುರಿತು ವಿಚಾರಗೋಷ್ಠಿಯನ್ನು ಏರ್ಪಡಿಸಿತು. ಈ ಗೋಷ್ಠಿಗೆ ಭಾಷಣಕಾರರಾಗಿ ಮಹಿಳಾ ಕಾಲೇಜಿನ ಪ್ರಾಧ್ಯಾಪಕಿ ಉಷಾ ಶರ್ಮಾ ಆಗಮಿಸಿದ್ದರು. ಶ್ರೀಮತಿ ಉಷಾಶರ್ಮಾ ಮತ್ತು ಸಮಿತಿಯ ಸಂಚಾಲಕಿ ಕಾಂ. ಶರೀಫಾ ಮಾತನಾಡುತ್ತಾ, ಸರ್ಕಾರ ಸಗಟು ವ್ಯಾಪಾರವನ್ನು ತಾನೇ ವಹಿಸಿಕೊಂಡು ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಜನತೆಗೆ ವಿತರಣೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದರು,

ಕಾರ್ಯಕ್ರಮದ ನಿರ್ವಹಣೆಯನ್ನು ಕು. ಶಕುಂತಲಾ ಗೋಪಶೆಟ್ಟಿಯವರು ನಿರ್ವಹಿಸಿದರು.

ಮಂಗಳೂರು :

4-2-81 ರಂದು ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಯೂನಿಯನ್‌ನ ಸಭೆ ಸೇರಿ, ಸರ್ಕಾರ ಬಸ್ ದರ ಏರಿಸಿದ್ದನ್ನು ಖಂಡಿಸಿತು. ಕನಿಷ್ಠ ಸಂಬಳವನ್ನು ಮತ್ತು ಮೋಟಾರ್ ಕೆಲಸಗಾರರಿಗೆ ಕಾನೂನು ಪ್ರಕಾರ ಕೊಡಬೇಕಾದ ಸವಲತ್ತನ್ನು ಕೊಡದ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ತನಿಖೆ ನಡೆಯದ ಬಗ್ಗೆ ಸಭೆ ಚರ್ಚಿಸಿ ಮುಂದಿನ ಕ್ರಮ ಕೈಕೊಳ್ಳಲು ನಿರ್ಧರಿಸಿತು.

ಸಾರ್ವಜನಿಕ ಕ್ಷೇತ್ರದ ನೌಕರರ ಹೋರಾಟಕ್ಕೆ ಬೆಂಬಲ ನೀಡುವ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಜನವರಿ 21ರಂದು ಬೆಂಗಳೂರು ಮತ್ತು ಚಿಂತಾಮಣಿಯಲ್ಲಿ ನಡೆದ ಗೋಲಿಬಾರ್ ಖಂಡಿಸಿ, ಎಲ್.ಐ.ಸಿ. ನೌಕರರ ಬಗ್ಗೆ ರಾಷ್ಟ್ರಪತಿಯವರು ಇತ್ತೀಚೆಗೆ ಹೊರಡಿಸಿದ ಸುಗ್ರೀವಾಜ್ಞೆಯನ್ನು ಖಂಡಿಸುವ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಯೂನಿಯನ್‌ನ ಉಪಾಧ್ಯಕ್ಷರಾದ ಶ್ರೀ ಮೋನಪ್ಪನವರು ವಹಿಸಿದ್ದರು.

ಮೈಸೂರು :

ಮೈಸೂರಿನ ಪೌರಕಾರ್ಮಿಕರು ದಿನಾಂಕ 9-2-81ರಿಂದ ಧರಣಿ ಮುಷ್ಕರದಲ್ಲಿದ್ದಾರೆ. ಮೈಸೂರು ನಗರ ವಿಸ್ತರಣೆಗೊಂಡಿದ್ದರೂ ಇದಕ್ಕೆ ಅನುಗುಣವಾಗಿ ಪೌರಕಾರ್ಮಿಕರ ಸಂಖ್ಯೆ ಹೆಚ್ಚಾಗಿಲ್ಲ. ಇದರಿಂದಾಗಿ ಪೌರಕಾರ್ಮಿಕರ ಹೊರೆ ಹೆಚ್ಚಾಗಿದೆ. ಗಗನಕ್ಕೇರಿರುವ ಬೆಲೆಗಳಿಗನುಸಾರವಾಗಿ ಸಂಬಳ, ಭತ್ತೆ ಹೆಚ್ಚುತ್ತಿಲ್ಲ. ಪೌರಕಾರ್ಮಿಕರಿಗೆ ಇರುವ ವಸತಿಗಳು ವಾಸಕ್ಕೆ ಯೋಗ್ಯವಾಗಿಲ್ಲ.

ಮೇಲ್ಕಾಣಿಸಿದ ತಮ್ಮ ಕೆಲವು ಕುಂದುಕೊರತೆಗಳ ಬಗ್ಗೆ ಕಾರ್ಪೊರೇಷನ್ ಆಡಳಿತವರ್ಗಕ್ಕೆ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದರು. ಬೇಡಿಕೆ ಈಡೇರಿಸುವುದಕ್ಕೆ ಆಡಳಿತವರ್ಗ ಒಪ್ಪಿಕೊಂಡಿತ್ತು.

ಆದರೆ ಇದುವರೆಗೂ ಬೇಡಿಕೆಗಳು ಜಾರಿಯಾಗದೆ ಇರುವುದರಿಂದ, ಪೌರಕಾರ್ಮಿಕರು ಕಾರ್ಪೊರೇಷನ್ ಕಛೇರಿಯ ಮುಂದೆ 9-2-81ರಿಂದ 17-2-81ರ ವರೆಗೆ ಧರಣಿ ಮುಷ್ಕರ ಪ್ರಾರಂಭ ಮಾಡಿದ್ದಾರೆ. ಹೋರಾಟಕ್ಕೆ ಸಹಕರಿಸುವಂತೆ ಸಾರ್ವಜನಿಕರಿಗೆ, ಕಾಂ. ಎಂ. ಎನ್. ಉಗ್ರಪ್ಪ ಮತ್ತು ಕಾಂ. ಸಿ. ಕೆ. ಮೋನ್ ವಿನಂತಿಸಿಕೊಂಡಿದ್ದಾರೆ.

●

ಜಿಲ್ಲಾ ಪ್ರೆಸ್ ಕಾರ್ಮಿಕರ ಪ್ರತಿನಿಧಿ ಸಭೆ

ಪ್ರೆಸ್ ಕಾರ್ಮಿಕರ ಒಪ್ಪಂದವು ಇದೇ ಮಾರ್ಚ್ ತಿಂಗಳಲ್ಲಿ ಅಂತ್ಯವಾಗಲಿದ್ದು, ಇಂದಿನ ಬೆಲೆಏರಿಕೆ ಹಾಗೂ ಪ್ರೆಸ್ ಕಾರ್ಮಿಕರಿಗೆ ಈಗ ಸಿಗುತ್ತಿರುವ ವೇತನ, ಈ ಎಲ್ಲಾ ವಿಷಯಗಳನ್ನು ಚರ್ಚಿಸಿ, ಹೊಸ ಕೇಳಿಕೆಗಳನ್ನು ಮಾಲಕರ ಮುಂದಿಡಲು ತಾ. 25-1-81ರಂದು ಸೇರಿದ ದ.ಕ. ಜಿಲ್ಲಾ ಪ್ರೆಸ್ ಕಾರ್ಮಿಕರ ಪ್ರತಿನಿಧಿ ಸಭೆಯಲ್ಲಿ ನಿರ್ಣಯಿಸಲಾಯಿತು. ಈ ಸಭೆಯಲ್ಲಿ ಕೇಳಿಕೆಗಳ ಬಗ್ಗೆ, ಪ್ರತಿನಿಧಿಗಳು ಕೊಟ್ಟ ಹಲವಾರು ಸೂಚನೆಗಳನ್ನು ಚರ್ಚಿಸಿ, ಕೇಳಿಕೆಗಳನ್ನು ಮಾಲಕರ ಮುಂದೆ ಇಡಲು ಕಾರ್ಯಕಾರಿ ಸಮಿತಿಗೆ ಅಧಿಕಾರ ಕೊಡಲಾಯಿತು.

ಸಭೆಯ ಅಧ್ಯಕ್ಷ ಸ್ಥಾನ ವಹಿಸಿದ್ದ ಯೂನಿಯನ್ನಿನ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್ ಇಂದಿನ ಪರಿಸ್ಥಿತಿಯನ್ನು ವಿವರಿಸುತ್ತಾ, "ಸರ್ಕಾರದ ಮಜೂರ ವಿರೋಧಿ ನೀತಿಯಿಂದಾಗಿ, ಮಜೂರರು ತಮ್ಮ ಬೇಡಿಕೆಗಳನ್ನು ಪಡೆಯಲು ಹೋರಾಟಕ್ಕಿಳಿಯಬೇಕಾಗಿದೆ. ಹಾಗೆಯೇ ಪ್ರೆಸ್ ಕಾರ್ಮಿಕರು ಕೂಡಾ ತಮ್ಮ ಬೇಡಿಕೆಗಳನ್ನು ಪಡೆಯಬೇಕಾದರೆ ಹೋರಾಟಕ್ಕೆ ತಯಾರಾಗಬೇಕೆಂದ ಅವರು ಇಂದು ಸಂಘಟಿತ ಮಜೂರವರ್ಗ ತಮ್ಮ ಕೇಳಿಕೆಗಳನ್ನು ಪಡೆಯಲು ನಡೆಸುವ ಹೋರಾಟದೊಡನೆ ಬೆಲೆಏರಿಕೆ ಹಾಗೂ ಇನ್ನಿತರ ಸರ್ಕಾರದ ಮಜೂರ ವಿರೋಧಿನೀತಿ ವಿರುದ್ಧ ಹೋರಾಟವನ್ನು ಬಲಪಡಿಸಬೇಕೆಂದರು."

ಪ್ರಾರಂಭದಲ್ಲಿ ಸಿ.ಐ.ಟಿ.ಯು. ರಾಜ್ಯಸಮಿತಿ ಸದಸ್ಯರಾದ ಕಾಂ. ಜಿ. ವಿ. ಪವಾರ್‌ರವರ ನಿಧನಕ್ಕೆ ಸಂತಾಪ ಸೂಚನೆಯನ್ನು ಸಭೆಯು ವ್ಯಕ್ತಪಡಿಸಿತು.

ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ನೌಕರರ ಹೋರಾಟಕ್ಕೆ ಬೆಂಬಲ ನೀಡುವ ಹಾಗೂ ಕೇಂದ್ರ ಸರ್ಕಾರವು ಅವರ ಕೇಳಿಕೆಯನ್ನು ಈಡೇರಿಸುವಂತೆ ಒತ್ತಾಯಿಸುವ, ತಾ.21-1-81 ರಂದು ಬೆಂಗಳೂರಿನಲ್ಲಿ ಮತ್ತು ಚಿಂತಾಮಣಿಯಲ್ಲಿ ಪೋಲೀಸರು ನಡೆಸಿದ ಅಮಾನುಷ ಗೋಲಿಬಾರನ್ನು ಖಂಡಿಸುವ ಮತ್ತು ಇದರ ನ್ಯಾಯಾಂಗ ತನಿಖೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸುವ ಠರಾವು ಸಭೆಯಲ್ಲಿ ಮಂಜೂರಾದವು.

ಪ್ರತಿನಿಧಿ ಸಭೆಯಲ್ಲಿ ಯೂನಿಯನ್ನಿನ ಉಪಾಧ್ಯಕ್ಷ ಕಾಂ. ಯು. ಪಿ. ಡಿಸೋಜ, ಕಾಂ. ಬಿ. ಉಮಾನಾಥ ಮತ್ತು ಸಿ.ಐ.ಟಿ.ಯು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಕೆ. ಮೂಸಬ್ಬರವರು ಮಾತನಾಡಿದರು. ಕೊನೆಯಲ್ಲಿ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಬಿ. ಭುಜಂಗ ಮಾರ್ಲರು ಧನ್ಯವಾದವನ್ನಿತ್ತರು. ●

ಪೋಲೀಸ್ ದೌರ್ಜನ್ಯ ಪ್ರತಿಭಟಿಸಿ ವಿದ್ಯಾರ್ಥಿಗಳ ಸಭೆ

ದಿ. 24-1-81ರಂದು ತುಮಕೂರಿನ ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿಗಳು ಸಭೆಸೇರಿ ದಿ. 21-1-81ರಂದು ಚಿಂತಾಮಣಿಯಲ್ಲಿ ಮತ್ತು ಬೆಂಗಳೂರಿನಲ್ಲಿ ನಡೆದ ಪೋಲೀಸ್ ಗೋಲಿಬಾರನ್ನು ಖಂಡಿಸಿದರು.

ಪೋಲೀಸ್ ದೌರ್ಜನ್ಯಕ್ಕೆ ಧಿಕ್ಕಾರ! ಜನವಿರೋಧಿ ಗುಂಡೂರಾವ್ ಸರ್ಕಾರಕ್ಕೆ ಧಿಕ್ಕಾರ! ಎಂಬಿತ್ಯಾದಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಯಿಸಿ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿಗಳು ಧಾವಿಸಿ ಬಂದು ಮನವಿ ಸ್ವೀಕರಿಸಿ ಸಹಾನುಭೂತಿ ವ್ಯಕ್ತಪಡಿಸಿದರು. ಇವರೊಟ್ಟಿಗೇ ವಿದ್ಯಾರ್ಥಿಗಳ ಬೇಡಿಕೆಗಳ ಬಗ್ಗೆಯು ಮನವಿ ಸಲ್ಲಿಸಲಾಯಿತು.

ಮೆರವಣಿಗೆಯ ನೇತೃತ್ವವನ್ನು ಎಸ್.ಎಫ್.ಐ.ನ ಕಾಂ, ನಾಗರಾಜ್, ಆರ್. ರವೀಂದ್ರನಾಯಕ್ ಹಾಗೂ ಮಾರಣ್ಣ ಅವರಲ್ಲದೇ ವಿ. ಮಂಜುನಾಥ, ಗೋವಿಂದಯ್ಯ ಮತ್ತಿತರರು ವಹಿಸಿದ್ದರು.

ಮೆರವಣಿಗೆಯನ್ನು ನೋಡಿದ ವ್ಯಾಪಾರಗಾರರು, ಹೋಟೆಲ್ ಮಾಲೀಕರು ತಮ್ಮತಮ್ಮ ವ್ಯಾಪಾರ ಸ್ಥಗಿತಗೊಳಿಸಿದ ಕಾರಣ ಇಡೀ ನಗರದಲ್ಲಿ ಬಂದ್ ವಾತಾವರಣ ಕಂಡುಬಂದಿತು. ○

ಬಸ್ ದರ ಏರಿಕೆಗೆ ವಿರೋಧ

ಇತ್ತೀಚಿಗೆ ಸರ್ಕಾರವು ಏಕಪಕ್ಷೀಯವಾಗಿ ಬಸ್ ದರ ಏರಿಸಿರುವುದನ್ನು ಪ್ರತಿಭಟಿಸಿ ದಿನಾಂಕ 25-1-81 ಸೇರಿದ ದ. ಕ. ಜಿಲ್ಲೆಯ ಎಸ್.ಎಫ್.ಐ. ಘಟಕ ವಿರೋಧಿಸಿದೆ. ಡೀಸೆಲ್ ಬೆಲೆ ಏರಿದೆ ಎಂಬ ಕಾರಣಕ್ಕಾಗಿ ಬಸ್ ಟಿಕೇಟ್ ದರವನ್ನು ಲಂಗುಲಗಾಮಿಲ್ಲದೇ ಏರಿಸಿ ಸಾರ್ವಜನಿಕರನ್ನು ನೇರವಾಗಿ ಸುಲಿಯಲು ತೊಡಗಿರುವ ಸರ್ಕಾರದ ನೀತಿಯನ್ನು ಉಗ್ರವಾಗಿ ಖಂಡಿಸಲಾಯಿತು. ಸರ್ಕಾರದ ಈ ಕ್ರಮ ಖಾಸಗೀ ಬಸ್ ಮಾಲೀಕರನ್ನು ಉತ್ತೇಜಿಸಿದಂತಾಗಿದೆ. ಸರ್ಕಾರದ ಜನವಿರೋಧಿ ನೀತಿಯ ವಿರುದ್ಧ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರೂ ಪ್ರತಿಭಟನೆಗೆ ಸಿದ್ಧರಾಗುವಂತೆ ಕರೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ತಮ್ಮ ಬೇಡಿಕೆಗಳಿಗೋಸ್ಕರ ಹೋರಾಟ ನಡೆಯುತ್ತಿರುವ ಐ. ಟಿ. ಐ. (Industrial Training Institute)ನ ವಿದ್ಯಾರ್ಥಿಗಳ ಹೋರಾಟವನ್ನು ಬೆಂಬಲಿಸಲಾಯಿತು.

ರಾಜ್ಯದ ವಿವಿಧ ಕಡೆ ಇರುವ ಐ.ಟಿ.ಐ. ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಸಂಯುಕ್ತ ಹೋರಾಟಕ್ಕೆ ಪ್ರಯತ್ನಿಸಬೇಕೆಂದು ಕರೆಕೊಡಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಪಿ. ರಾಮಾನುಜನ್ ವಹಿಸಿದ್ದರು. ಪ್ರಾರಂಭದಲ್ಲಿ ಪಿ. ಉಮೇಶ್ ಭಂಡಾರಿ ಸ್ವಾಗತಿಸಿದರು. ಸಭೆಯಲ್ಲಿ ರಾಜ್ಯ ಸಮಿತಿ ಅಧ್ಯಕ್ಷ ಆರ್. ಜಯಕುಮಾರ್ ಹಾಜರಿದ್ದರು. ●

ಅತ್ಯಾಚಾರಕ್ಕೆ ಪ್ರಯತ್ನ

ಕೋಣಾಜೆ ಗ್ರಾಮದ ಕುಂಟಲಗುರಿ ಎಂಬಲ್ಲಿರುವ ಬೇಬಿ ಎಂಬ ಹರಿಜನ ಮಹಿಳೆಯ ಅತ್ಯಾಚಾರಕ್ಕೆ ಪ್ರಯತ್ನ ನಡೆದ ವರದಿ ಬಂದಿದೆ. ಬೀಡಿ ಕಟ್ಟಿ ಜೀವನ ನಡೆಸುತ್ತಿರುವ ಬೇಬಿಯನ್ನು 4-2-81 ರಂದು ಮೋಣಿಬ್ಯಾರಿ ಎಂಬುವನು ಬಲಾತ್ಕರಿಸಲು ಯತ್ನಿಸಿದ. ಅದೇ ರಾತ್ರಿ ಬಡ ಹರಿಜನರ ಗುಡಿಸಲುಗಳಿಗೆ ಬೆಂಕಿಕೊಟ್ಟನು.

ಬಡ ಬೀಡಿ ಮಜೂರರು ತಮ್ಮ ರಕ್ಷಣೆಗಾಗಿ ನಡೆಸುವ ಹೋರಾಟವನ್ನು ಹತ್ತಿಕ್ಕಲು ಸಮಾಜಘಾತುಕರು ನಡೆಸುವ ಈ ಪ್ರಯತ್ನಗಳನ್ನು "ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್"ನ ಕಾರ್ಯದರ್ಶಿ ಕಾಂ. ಲೋಕಯ್ಯ ಉಗ್ರವಾಗಿ ಖಂಡಿಸಿರುವರಲ್ಲದೇ ಸೂಕ್ತ ಕ್ರಮ ಕೈಕೊಳ್ಳಲು ಹತ್ತಿರದ ಪೋಲೀಸ್ ಅಧಿಕಾರಿಗೆ ಒತ್ತಾಯಿಸಿದ್ದಾರೆ. ○

ಅನ್ನದಾತರ ಅಭೂತಪೂರ್ವ ಪ್ರದರ್ಶನ

ಎಲ್ಲ ಸಂಪತ್ತು, ಸಂಸ್ಕೃತಿ ಮತ್ತು ನಾಗರೀಕತೆಗೆ ಅಡಿಪಾಯವಾಗಿರುವ ಮಾನವನ ಮೂಲ ಅಗತ್ಯಗಳಲ್ಲೊಂದಾದ ಆಹಾರದ ಸೃಷ್ಟಿಕರ್ತರಾದ ರೈತರ ಭಾರಿ ಪ್ರದರ್ಶನ ಫೆ. 5ರಂದು ಬೆಂಗಳೂರಿನಲ್ಲಿ ಜರುಗಿತು.

ರೈತರ ಈ ಪ್ರದರ್ಶನ ಜನ ಪ್ರವಾಹವಾಗಿ ಪರಿವರ್ತನೆಗೊಳ್ಳಲು ಸಂಪತ್ತಿನ ಸೃಷ್ಟಿಕರ್ತರಾದ ನಗರದ ಕಾರ್ಮಿಕರು ಪ್ರಧಾನ ಕಾರಣಕರ್ತರು.

ದುಡಿಯುವ ರೈತ ಮತ್ತು ಕಾರ್ಮಿಕ ಪರಸ್ಪರ ವೈರಿಗಳಲ್ಲ-ಬದಲಾಗಿ ಅವರಿಬ್ಬರು ಆಪ್ತ ಮಿತ್ರರು ಎಂಬುದನ್ನು ರುಜುವಾತು ಮಾಡಿ ಬೆಂಗಳೂರು ನಗರದ ಮುಖ್ಯ ಬೀದಿಗಳಲ್ಲಿ ರೈತ ಕಾರ್ಮಿಕರು ಬೃಹತ್ ಪ್ರದರ್ಶನ ನಡೆಸಿದರು.

ರಾಜ್ಯದ ಧಾರವಾಡ ಜಿಲ್ಲೆಯ ನರಗುಂದ-ನವಲಗುಂದದಿಂದ ಮುನ್ನೂರು ಮೈಲುಗಳಿಗೂ ಅಧಿಕ ಪ್ರಮಾಣದ ಹಾದಿಯನ್ನು ಕಾಲು ನಡಿಗೆಯಿಂದ ಕ್ರಮಿಸಿ ಬಂದ ರೈತರಿಗೆ ಹಾದಿಯುದ್ದಕ್ಕೂ ಸಿಕ್ಕಂತೆ ನಗರದಲ್ಲೂ ಅಭೂತಪೂರ್ವ ಸ್ವಾಗತ ಸಿಕ್ಕಿತು. ಜಾಥಾದಲ್ಲಿ ಬಂದ ರೈತರನ್ನು ಸಂಭ್ರಮದಿಂದ ಸ್ವಾಗತಿಸಿದ ದೃಶ್ಯ ಅವಿಸ್ಮರಣೀಯವಾಗಿತ್ತು. ಹುತಾತ್ಮರ ಜ್ಯೋತಿಯನ್ನು ಹೊತ್ತು ತಂದ ಈ ಮುಖ್ಯ ಜಾಥಾದ ಕಡೆಗೇ ಎಲ್ಲರ ಗಮನ. ಜ್ಯೋತಿಹೊತ್ತಿದ್ದ ರೈತ ನಾಯಕರು ಹೂವಿನ ಹಾರಗಳಿಂದ ಮುಚ್ಚಿಹೋಗಿದ್ದರು.

ಕೋಲಾರ ಜಿಲ್ಲೆಯಿಂದ ಬಂದಿದ್ದ ಜಾಥಾದ ವೈಶಿಷ್ಟ್ಯವೇ ಬೇರೆ. ಕೃಷಿ ಕಾರ್ಮಿಕರನ್ನು ಒಳಗೊಂಡ ಈ ಜಾಥಾದ ತುಂಬೆಲ್ಲ ಕೆಂಬಾವುಟಗಳು. ಮೈಸೂರು, ಕೊಡಗು, ದ. ಕನ್ನಡ ಮತ್ತು ಹಾಸನ ಜಿಲ್ಲೆಗಳ ಕಡೆಯಿಂದ ಬಂದ ರೈತರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಉತ್ಸಾಹ ಮಾತ್ರ ಅವರಲ್ಲಿ ತುಂಬಿತುಳುಕುತ್ತಿತ್ತು. ರಾಜ್ಯದ ಉತ್ತರ ತುದಿ ಗುಲ್ಬರ್ಗ, ಬಿಜಾಪುರ, ರಾಯಚೂರು, ಬಳ್ಳಾರಿ ಜಿಲ್ಲೆಗಳೂ ಸೇರಿದಂತೆ ಶಿವಮೊಗ್ಗ, ತುಮಕೂರು, ಬೆಂಗಳೂರು ಜಿಲ್ಲೆಯ ರೈತರೂ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಹೋರಾಟದ ಹಾದಿಯಲ್ಲಿ ಮುನ್ನುಗ್ಗುತ್ತ ಬಂದ ರೈತರು ತಾವೇ ರಚಿಸಿದ ಹಾಡುಗಳನ್ನು ಹೇಳುತ್ತಿದ್ದರು. ಅವರ ಹಾಡುಗಳಲ್ಲಿ ರೈತರ ಕಷ್ಟಕಾರ್ಪಣ್ಯಗಳು ಮತ್ತು ಸರ್ಕಾರದ ಮೇಲೆ ಅವರಿಗಿರುವ ಸಿಟ್ಟು ಅಸಮಾಧಾನ ಸ್ಪಷ್ಟವಾಗಿತ್ತು.

ಭಾವಾವೇಶಪೂರಿತರಾಗಿ ಹಾಡುತ್ತಾ ಸಾಗಿಬಂದ ರೈತರಿಗೆ ನಗರದ ಮಹಿಳೆಯರು ಆರತಿ ಬೆಳಗಿದರು. ಅವರ ಹಣೆಗಳಲ್ಲಿ ತಿಲಕವಿಟ್ಟರು. ಹೂಮಾಲೆ ಹಾಕಿದರು. ಜಾಥಾದ ಮೇಲೆ ಹೂಮಳೆಗರೆದರು. ಕುಡಿಯಲು ಮಜ್ಜಿಗೆ, ಪಾನಕ, ತಿನ್ನಲು ತಿಂಡಿಯ ಪೊಟ್ಟಣಗಳನ್ನು ಧಾರಾಳವಾಗಿ ಕೊಟ್ಟರು. ಶತಮಾನಗಳಿಂದ ನಮಗೆ ಅನ್ನ ಕೊಟ್ಟ ರೈತರಿಗೆ ನಾವು ಒಂದು ದಿವಸವಾದರೂ ಊಟ ಬಡಿಸಬಾರದಾ ಎಂಬ ಮನೋಭಾವ ಕಾರ್ಮಿಕರಲ್ಲಿತ್ತು.

ಹುಚ್ಚೆದ್ದ ನದಿ ಹರಿದುಹೋಗುವಂತೆ ಸಾಗುತ್ತಿದ್ದ ರೈತ-ಕಾರ್ಮಿಕರನ್ನು ನೋಡಲು ರಸ್ತೆಯ ಇಕ್ಕೆಲಗಳಲ್ಲೂ ಸಾವಿರಾರು ಜನ ಕಿಕ್ಕಿರಿದು ನಿಂತಿದ್ದರು. ಮಹಡಿಗಳ ಮೇಲೆ, ಕೆಲವು ಕಡೆ ಮರಗಳ ಮೇಲೂ ನಿಂತು ಜಾಥಾವನ್ನು ಜನ ವೀಕ್ಷಿಸಿದರು.

ಇತಿಹಾಸದಲ್ಲಿ ಪ್ರಥಮ

ಬಹುಶಃ ಸ್ವಾತಂತ್ರ್ಯ ಹೋರಾಟದ ಸಮಯ ಬಿಟ್ಟರೆ ಇಷ್ಟೊಂದು ದೊಡ್ಡ ಪ್ರಮಾಣದ ಜನ ಪ್ರದರ್ಶನ ಕರ್ನಾಟಕದ ಇತಿಹಾಸದಲ್ಲಿ ಇದೇ ಪ್ರಥಮ.

ಸಿ. ಪಿ. ಐ. (ಎಂ), ಸಿ. ಪಿ. ಐ., ಅರಸು ಕಾಂಗ್ರೆಸ್ ಮತ್ತು ಲೋಕದಳ ಸೇರಿದ ಪ್ರಗತಿಪರ ಜನತಂತ್ರ ರಂಗ ವ್ಯವಸ್ಥೆ ಮಾಡಿದ್ದ ಈ ರೈತರ ಜಾಥಾಕ್ಕೆ ಹಲವಾರು ಕಾರ್ಮಿಕ ಸಂಘಗಳು, ವಿದ್ಯಾರ್ಥಿ, ಯುವಜನ ಮತ್ತು ಮಹಿಳಾ ಸಂಘಟನೆಗಳು ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಮ್ಮ ಬೆಂಬಲ ವ್ಯಕ್ತಪಡಿಸಿ ಜಾಥಾದಲ್ಲಿ ಪಾಲ್ಗೊಂಡಿದ್ದವು.

ಬೇಡಿಕೆಗಳು

ರೈತರ ಮೇಲೆ ವಿನಾಕಾರಣ ಹೇರಲಾಗಿರುವ ಬೆಟರ್‌ಮೆಂಟ್ ಲೇವಿ ರದ್ದತಿ ಮತ್ತು ರೈತನ ಬೆಳೆಗೆ ಲಾಭದಾಯಕ ಬೆಲೆ ನಿಗಧಿ ಕುರಿತು ಹಿಂದೆ ನಡೆದ ರೈತಚಳುವಳಿಯಲ್ಲಿ ಬಂಧಿಸಲಾದ ಎಲ್ಲಾ ರೈತ ಮುಖಂಡರನ್ನು ಬೇಷರತ್ ಬಿಡುಗಡೆ ಮಾಡಬೇಕು, ಅವರ ಮೇಲೆ ಹಾಕಿರುವ ಖಟ್ಲೆಗಳನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು ಎಂಬ ಪ್ರಧಾನ ಬೇಡಿಕೆಯ ಜೊತೆಗೆ ರೈತರ ಮತ್ತು ಕೃಷಿಕಾರ್ಮಿಕರ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಈ ಜಾಥಾವನ್ನು ವ್ಯವಸ್ಥೆಗೊಳಿಸಲಾಗಿತ್ತು.

ಹೊಸಶಕ್ತಿ ದಿಕ್ಸೂಚಿ

ರೈತರ ಬೇಡಿಕೆಗಳಿಗೆ ಮತ್ತು ಜಾಥಾಕ್ಕೆ ಸಿಕ್ಕ ಅಭೂತಪೂರ್ವ ಸ್ವಾಗತ ಮತ್ತು ಬೆಂಬಲದಿಂದ ಕಂಡು ಬಂದ ಮುಖ್ಯ ಅಂಶವೆಂದರೆ ಕಾಂಗ್ರೆ ವಿರುದ್ಧ ರೈತರ, ಕೃಷಿಕಾರ್ಮಿಕರ ಮತ್ತು ನಗರಗಳಲ್ಲಿನ ಕಾರ್ಮಿಕರ ಪರ್ಯಾಯ ರಾಜಕೀಯ ಶಕ್ತಿ.

ರೈತರಿಗೆ ಮತ್ತು ಕಾರ್ಮಿಕರಿಗೆ ರಾಜಕೀಯ ಬೇಡ ಎಂಬ ಅಭಿಪ್ರಾಯವನ್ನು ಧಿಕ್ಕರಿಸಿ ತಮ್ಮದೇ ಆದ ಜನಪರ ಧೋರಣೆಗಳ ರಾಜಕೀಯವನ್ನು ಕಂಡುಕೊಳ್ಳಲು ಎಡ ಮತ್ತು ಪ್ರಜಾಪ್ರಭುತ್ವ ರಾಜಕೀಯ ಪಕ್ಷಗಳ ಜೊತೆ ಸಹಕರಿಸಲು ರೈತ ಕಾರ್ಮಿಕರು ಹೊರಟಿರುವುದು ಸ್ಪಷ್ಟವಾಗಿ ಗೋಚರಿಸಿತು.

ಸಿ.ಪಿ.ಐ.(ಎಂ)ನ ತರುಣ ನಾಯಕರಾದ ಕಾಂ. ವಿ. ಎನ್. ಹಳಕಟ್ಟಿ, ಕಾಂ. ಪಿ. ಜಗನ್ನಾಥ್ ಅವರು ನರಗುಂದ-ನವಲಗುಂದದಿಂದ ರೈತರ ಜೊತೆಗೆ ಕಾಲುನಡಿಗೆಯಲ್ಲಿ ಬಂದಿದ್ದರು. ಇವರೀರ್ವರನ್ನು ನೋಡಲು ಹಲವರ ಕುತೂಹಲ. ಅರಸು ಕಾಂಗ್ರೆಸ್ಸಿನ ಶಾಸಕ ಅಗ್ನಿಹೋತ್ರಿ ಮತ್ತು ಸಿ.ಪಿ.ಐ.ನ ನಾಯಕ ಶ್ರೀನಿವಾಸಗುಡಿ ಜಾಥಾದ ಉದ್ದಕ್ಕೂ ಕಾಲುನಡಿಗೆಯಲ್ಲಿ ಬಂದಿದ್ದರು.

ಐಕ್ಯತೆ ಮುಂದುವರಿಸೋಣ

ಸಂಜೆ ವಿಧಾನಸೌಧದ ಮುಂಭಾಗದಲ್ಲಿನ ಕಬ್ಬನ್ ಪಾರ್ಕಿನಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ನಾಲ್ಕು ಪಕ್ಷಗಳ ನಾಯಕರು ಐಕ್ಯತೆಯನ್ನು ಮುಂದುವರಿಸುವುದಾಗಿ ಮತ್ತು ರೈತಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆಗಾಗಿ ಹೋರಾಟ ಮುಂದುವರಿಸುವುದಾಗಿ ಘೋಷಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ರಾಜೇಶ್ವರರಾವ್, ದೇವರಾಜ ಅರಸು, ಸಿ.ಪಿ.ಐ.(ಎಂ)ನ ಕಾಂ. ವಿ. ಎನ್. ಹಳಕಟ್ಟಿ, ಕಾಂ. ಅಪ್ಪಸ್ವಾಮಿರೆಡ್ಡಿ, ಅರಸು ಕಾಂಗ್ರೆಸ್ಸಿನ ಅಗ್ನಿಹೋತ್ರಿ, ಮುಂತಾದವರು ಮಾತನಾಡಿ ಸರ್ಕಾರದ ರೈತವಿರೋಧಿ ನೀತಿಯನ್ನು ಖಂಡಿಸಿದರು.

ಪ್ರಗತಿಪರ ಜನತಂತ್ರರಂಗದ ಸಂಚಾಲಕ ಡಿ. ಬಿ. ಚಂದ್ರೇಗೌಡ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿ.ಪಿ.ಐ.(ಎಂ)ನ ಕಾಂ. ವಿ. ಜೆ. ಕೆ. ನಾಯರ್ ಸ್ವಾಗತಿಸಿದರು. ಸಿ. ಐ. ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರು ವಂದಿಸಿದರು.

ವರದಿ : ಎಸ್. ಎಲ್. ಜಿ.

ರಾಯರ ಬೇಜವಾಬ್ದಾರಿ ಮತ್ತು ರೈತ-ಕಾರ್ಮಿಕರ ಆಕ್ರೋಶ

ತಮ್ಮ ಸಮಸ್ಯೆಗಳನ್ನು ಸರ್ಕಾರದ ಮುಂದಿಟ್ಟು ಅವುಗಳ ಪರಿಹಾರಕ್ಕೆ ಒತ್ತಾಯ ಪಡಿಸಲು ಬೆಂಗಳೂರು ನಗರಕ್ಕೆ ನೂರಾರು ಮೈಲುಗಳು ನಡೆದು ಬಂದಿದ್ದ ಹತ್ತಾರು ಸಾವಿರ ರೈತರನ್ನು ಮತ್ತು ಇವರಿಗೆ ಬೆಂಬಲ ವ್ಯಕ್ತಪಡಿಸಿದ ಲಕ್ಷಕ್ಕೂ ಅಧಿಕ ಕಾರ್ಮಿಕರನ್ನು ವಿದ್ಯಾರ್ಥಿ ಯುವಜನ, ದಲಿತರನ್ನು, ಮಹಿಳೆಯರನ್ನು ಹಾಗೂ ನಗರದ ನಾಗರೀಕರನ್ನು "ಬಾಡಿಗೆ ಜನರೆಂದು" ಕರೆದು ತಮ್ಮ ಬೇಜವಾಬ್ದಾರಿ ನಡೆಯನ್ನು ತೋರಿದ ಮುಖ್ಯಮಂತ್ರಿ ಗುಂಡೂರಾಯರನ್ನು ರೈತ ಕಾರ್ಮಿಕರು ತರಾಟೆಗೆ ತೆಗೆದುಕೊಳ್ಳದೆ ಬಿಡಲಿಲ್ಲ.

ಫೆಬ್ರವರಿ 6ರಂದು ಮಧ್ಯಾಹ್ನ ಒಂದು ಗಂಟೆಗೆ ವಿಧಾನಸೌಧಕ್ಕೆ ಆಕ್ರೋಶಪೂರಿತ ರೈತರು ಮುತ್ತಿಗೆ ಹಾಕಿದರು.

ಅಪಮಾನಕರ, ದುರಹಂಕಾರದ ಮಾತುಗಳನ್ನಾಡಿದ ಮುಖ್ಯಮಂತ್ರಿಗಳು ತಮ್ಮ ಮಾತನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ಧರಣಿ ಕುಳಿತರು.

ರೈತರ ಈ ಕ್ರಮಕ್ಕೆ ಶಾಸನ ಸಭೆಯ ಪ್ರತಿಪಕ್ಷದ ಸದಸ್ಯರೂ ತಮ್ಮ ಬೆಂಬಲ ವ್ಯಕ್ತಪಡಿಸಿ ಅವರೂ ಧರಣಿ ಹೂಡಿದರು.

ಆರುನೂರು ಜನರ ಬಂಧನ

ಸಿಟ್ಟಿಗೆದ್ದಿದ್ದ ರೈತರನ್ನು ಏನು ಮಾಡಬೇಕೆಂದು ತೋಚದ ಸರ್ಕಾರ ಒಂದು ಗಂಟೆಯ ನಂತರ ಬಂಧನಕ್ಕೆ ಆಜ್ಞೆ ಹೊರಡಿಸಿ 600ಕ್ಕೂ ಅಧಿಕ ರೈತರನ್ನು ಬಂಧಿಸಿತು. ವಿಧಾನಸಭೆಯಲ್ಲಿ 24 ವಿರೋಧಿ ಶಾಸಕರು, ಪರಿಷತ್ತಿನ 4 ಸದಸ್ಯರು, ಸಿ.ಪಿ.ಐ.(ಎಂ)ನ ಕಾರ್ಯದರ್ಶಿ ಕಾಂ. ಎಂ.ಕೆ. ಭಟ್, ಎನ್. ಕೆ. ಉಪಾಧ್ಯಾಯ ಅವರು ಬಂಧಿತರಲ್ಲಿ ಪ್ರಮುಖರು.

ಬಂಧಿತರೆಲ್ಲರನ್ನೂ ರಾತ್ರಿಯ ವೇಳೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

"ಬಂಧಿತ ರೈತ ನಾಯಕರನ್ನು ಬಿಡುಗಡೆ ಮಾಡಿ, ಖಟ್ಲೆಗಳನ್ನು ಹಿಂತೆಗೆದುಕೊಳ್ಳಿ" ಎಂದು ಸರ್ಕಾರವನ್ನು ಒತ್ತಾಯಿಸಲು ಬಂದಿದ್ದ ರಾಜ್ಯದ ರೈತರನ್ನು ಮತ್ತೊಮ್ಮೆ ಬಂಧಿಸಿ, ಇನ್ನೊಂದು ಖಟ್ಲೆಯನ್ನು ಹಾಕಿದ ಕೊಡುಗೆಯೇ ಕಾಂಗ್ರೆ ಸರ್ಕಾರದ ಕೊಡುಗೆಯಾಗಿ ಪರಿಣಮಿಸಿತು.

ಸಿ.ಐ.ಟಿ.ಯು.ಗೆ ಸಂಯೋಜಿತವಾಗಿರುವ ರಾಜ್ಯದ ಎಲ್ಲಾ ಕಾರ್ಮಿಕಸಂಘಗಳ ಗಮನಕ್ಕೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯದ ಮೂರನೆಯ ಸಮ್ಮೇಳನವು ಹರಿಹರದಲ್ಲಿ ಮಾರ್ಚ್ 5ರಿಂದ 8ನೆಯ ತಾರೀಖಿನವರೆಗೆ ನಡೆಯುತ್ತದೆ. ಸಿ. ಐ. ಟಿ. ಯು. ಅಧ್ಯಕ್ಷರಾದ ಕಾಂ. ಬಿ. ಟಿ. ರಣದಿವೆಯವರು 5ರಂದು ಸಮ್ಮೇಳನವನ್ನು ಉದ್ಘಾಟಿಸುವ ನಿರೀಕ್ಷೆ ಇದೆ. 8ರಂದು ಸಮ್ಮೇಳನದ ಕಾರ್ಯಕ್ರಮದಲ್ಲಿ ಸಿ. ಐ. ಟಿ. ಯು. ಉಪಾಧ್ಯಕ್ಷ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಭಾಗವಹಿಸುತ್ತಾರೆ.

ಸಮ್ಮೇಳದ ನೋಟೀಸನ್ನು ರಾಜ್ಯದಲ್ಲಿರುವ ಸಿ. ಐ. ಟಿ. ಯು.ಗೆ ಸೇರಿರುವ ಎಲ್ಲಾ ಕಾರ್ಮಿಕ ಸಂಘಗಳಿಗೂ ತಾ. 30-1-1981 ರಂದು ಅಂಚೆಯ ಮೂಲಕ ಕಳುಹಿಸಲಾಗಿದೆ.

"ಸಿ. ಐ. ಟಿ. ಯು.ಗೆ ಸಂಯೋಜಿತವಾಗಿರು ಸಂಘಗಳು ಮಾತ್ರ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸಬೇಕು". ಇನ್ನೂ ಸಂಯೋಜಿತವಾಗದಿರುವ ಸಂಘಗಳು ವೀಕ್ಷಕರನ್ನು ಕಳುಹಿಸುವ ಬಗ್ಗೆ ರಾಜ್ಯ ಕೇಂದ್ರವನ್ನು ಸಂಪರ್ಕಿಸಬಹುದು.

ಸಮ್ಮೇಳನವು 1979ರ ಸದಸ್ಯತ್ವದ ಆಧಾರದಲ್ಲಿ ನಡೆಯುತ್ತದೆ. ಪ್ರತಿನಿಧಿಗಳನ್ನು ಈ ಸದಸ್ಯತ್ವದ ಆಧಾರದ ಮೇಲೆ ಚುನಾಯಿಸಬೇಕು.

ಹರಿಹರದಲ್ಲಿ ಸ್ವಾಗತಸಮಿತಿಯು ಭರದಿಂದ ಸಮ್ಮೇಳನಕ್ಕೆ ಸಿದ್ಧತೆಗಳನ್ನು ನಡೆಸುತ್ತಿದೆ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯಮಂಡಳಿ

ಬೆಂಗಳೂರು
ತಾ. 12-2-1981

(ತ್ರಿಪುರಾದ ಎಡರಂಗ ಸರಕಾರವು ಮೂರು ವರ್ಷ ಅಧಿಕಾರ ಅವಧಿಯನ್ನು ಯಶಸ್ವಿಯಾಗಿ ಪೂರೈಸಿದ ಸಂದರ್ಭದ ನಿಮಿತ್ತ ಕಾಂ. ದಶರಥ ದೇಬ್‌ರು ಈ ಲೇಖನವನ್ನು ಬರೆದಿದ್ದಾರೆ. ಕಾಂ. ದಶರಥದೇಬ್‌ರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರು ಹಾಗೂ ತ್ರಿಪುರಾದ ಶಿಕ್ಷಣ ಮಂತ್ರಿಯೂ ಆಗಿದ್ದಾರೆ)

ಜನವರಿ 5, 1981ಕ್ಕೆ ಮೂರು ವರ್ಷದ ಅಧಿಕಾರದ ಅವಧಿಯನ್ನು ಪೂರೈಸಿ ನಾಲ್ಕನೇ ವರ್ಷಕ್ಕೆ ತ್ರಿಪುರಾದ ಎಡರಂಗವು ಕಾಲಿಡುತ್ತಿರುವ ಸಂದರ್ಭದಲ್ಲಿ ತ್ರಿಪುರಾದ ಜನತೆಗೋಸ್ಕರ ಎಡರಂಗ ಸರ್ಕಾರವು ಶ್ರಮಿಸಿರುವುದೆಷ್ಟು? ಸರ್ಕಾರದ ಸಾಧನೆಗಳೇನು? ಇವೆಲ್ಲವನ್ನು ವಿಶ್ಲೇಷಿಸುವುದು, ಈ ಅವಧಿಯ ಸಾಧನೆಗಳ ಕೆಲವು ಅಂಶಗಳ ಬಗ್ಗೆ ಗಮನಿಸುವುದು ಅತ್ಯಗತ್ಯವಾದುದು.

1977ರ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಎಡರಂಗವು ತ್ರಿಪುರಾದ ಜನತೆಯ ಎದುರು ತನ್ನ ಕಾರ್ಯಕ್ರಮವನ್ನಿಟ್ಟಿತ್ತು. ಈ ಕಾರ್ಯಕ್ರಮದ ಆಧಾರದ ಮೇಲೆ ಎಡರಂಗ ಸರ್ಕಾರವು ಕಾರ್ಯನಿರ್ವಹಿಸುತ್ತಿದೆ.

ಜನತೆಯ ಸಮೀಪಕ್ಕೆ

ಜನತೆಯ ಸಮೀಪಕ್ಕೆ ಆಡಳಿತವನ್ನು ಕೊಂಡೊಯ್ದು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವ ಹೊಣೆಯನ್ನು ಎಡರಂಗವು ತನ್ನ ಆದ್ಯ ಕರ್ತವ್ಯವಾಗಿಟ್ಟುಕೊಂಡಿತು.

ಆಡಳಿತದಲ್ಲಿರುವ ಎಲ್ಲರನ್ನು ಜನತೆಯ ಸಮೀಪ ಕೊಂಡೊಯ್ಯುವುದು

ತಿಯಿಂದ ಅಸ್ತಿತ್ವಕ್ಕೆ ಬಂದವು. ಈ ಗ್ರಾಮ ಸಮಿತಿಗಳಿಗೆ ಸಾಕಷ್ಟು ನಿಧಿ ಮತ್ತು ಅಧಿಕಾರವನ್ನು ನೀಡಲಾಯಿತು. ಗ್ರಾಮ ಸಮಿತಿಗಳ ಕೆಲಸ ಕಾರ್ಯಗಳಲ್ಲಿ ನೆರವಾಗಲು ಪ್ರತಿ ಗ್ರಾಮ ಸಮಿತಿಗೆ ಒಬ್ಬೊಬ್ಬ ಪಂಚಾಯತಿ ಕಾರ್ಯದರ್ಶಿಯನ್ನು ಕೊಡಲಾಯಿತು.

ಶಾಸಕರು, ಗ್ರಾಮ ಸಮಿತಿ ಮುಖ್ಯಸ್ಥರನ್ನೊಳಗೊಂಡ ವಿಭಾಗ ಸಮಿತಿ (Block Development Committees) ರಚಿಸಲಾಯಿತು. ಈ ವಿಭಾಗ ಸಮಿತಿಗಳ, ಗ್ರಾಮ ಸಮಿತಿಗಳ ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

"ಕೂಲಿಗೆ ಕಾಳು", "ಮಣ್ಣಿನ ಸಾರ ಸಂರಕ್ಷಣ" ಯೋಜನೆಗಳು

ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

ಗುಡ್ಡಗಾಡು ಜನತೆಯ ರಕ್ಷಣೆ

ಎಡರಂಗ ಸರ್ಕಾರವು ಗುಡ್ಡಗಾಡಿನ ಜನರ ಹಿತರಕ್ಷಣೆ ಮಾಡಲು ಕಾತುರದಿಂದಿತ್ತು. ಭಾರತ ಸಂವಿಧಾನದಲ್ಲಿ ರಾಜ್ಯಗಳಿಗೆ ನೀಡಲಾಗಿರುವ ಎಲ್ಲ ಅಧಿಕಾರವನ್ನು ಉಪಯೋಗಿಸಿ ಈ ಬಗ್ಗೆ ಕಾರ್ಯಪ್ರವೃತ್ತವಾಯಿತು. ಕಾನೂನು ಬಾಹಿರವಾಗಿ ಹಸ್ತಾಂತರಗೊಂಡಿದ್ದ ಜಮೀನನ್ನು ಉಳಿಸಿಕೊಳ್ಳುವ ಕೆಲಸ ಕಷ್ಟಸಾಧ್ಯವಾದದ್ದಾದರೂ ಕೂಡ ನಿರ್ವಹಿಸಲಾಯಿತು. ಸ್ವಾಯತ್‌ತೆಯಿರುವ ಜಿಲ್ಲಾ ಪರಿಷತ್‌ಗಳನ್ನು ವಿಭಾಗಿಸಿ, ಗುಡ್ಡಗಾಡು ಜನರಿಗೆ ಪ್ರಾತಿನಿಧ್ಯವಿರುವ ಸ್ವಾಯತ್ ಜಿಲ್ಲಾ ಪರಿಷತ್‌ಗಳನ್ನು ರಚಿಸುವ ಕಾಯ್ದೆ ಮಾಡಲಾಯಿತು. ಈ ಕಾಯ್ದೆ ಮಾರ್ಚ್ 15, 1980ರಿಂದ ಜಾರಿಗೆ ಬಂತು. ಗುಡ್ಡಗಾಡು ಜನರ ಸ್ವಾಯತ್ ಜಿಲ್ಲಾ ಪರಿಷತ್‌ಗಳಿಗೆ ಚುನಾಣೆ ನಡೆಸುವ ಕಾನೂನುಗಳನ್ನು

ಮಿಂಕ ಪಂಟ್ಟದಲ್ಲಿ ಈ ಭಾಷೆಯನ್ನು ಮಾಧ್ಯಮವನ್ನಾಗಿ ಮಾಡಿ ಕೊಕ್ ಬೊರೊಕ್ ಭಾಷೆಬಲ್ಲ 250 ಶಿಕ್ಷಕರನ್ನು ನಿರ್ಮಿಸಲಾಗಿದ್ದು, ಇನ್ನೂ 250 ಶಿಕ್ಷಕರನ್ನು ಫೆಬ್ರವರಿ ಕೊನೆಯೊಳಗೆ ನಿಯಮಿಸಲಾಗುವದು. ಕೊಕ್‌ಬೊರೊಕ್ ಭಾಷೆಯಲ್ಲಿ 1ನೇ ಮತ್ತು ಎರಡನೇ ತರಗತಿಗೆ ಪಠ್ಯ ಪುಸ್ತಕಗಳನ್ನು ಮುದ್ರಿಸಿ ವಿತರಣೆ ಮಾಡಲಾಗಿದೆ.

"ಅವಶ್ಯಕತೆಗನುಗುಣವಾಗಿ ಆರ್ಥಿಕ ಆರ್ಥಿಕ ಸಹಾಯದ ಯೋಜನೆಯನ್ವಯ ಹಳೆಯ ಗುಡ್ಡಗಾಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ನೀಡಲಾಗುತ್ತಿದೆ. ರೂ.13,503,000 ಬೆಲೆಯ ಜೂಟ್ ಬೀಜಗಳನ್ನು 1980-81ನೇ ಸಾಲಿನಲ್ಲಿ 21,466 ಕುಟುಂಬಗಳಿಗೆ ವಿತರಣೆ ಮಾಡಲಾಯಿತು.

ಶಿಕ್ಷಣ ರಂಗದಲ್ಲಿ

ಶಿಕ್ಷಣ ಕ್ಷೇತ್ರದಲ್ಲಿ ಸಂಪೂರ್ಣ ಬದಲಾವಣೆ ತರುವದು ರಾಜ್ಯ ಸರ್ಕಾರದ ಅಧಿಕಾರದ ವ್ಯಾಪ್ತಿಯಲ್ಲಿಲ್ಲದ ಕಾರಣ ತನ್ನ ಶಕ್ತಿಮೀರಿ ಈ ದಿಶೆಯಲ್ಲಿ ಎಡರಂಗ ಸರ್ಕಾರವು ಶ್ಲಾಘನೀಯ ಕೆಲಸ ಮಾಡಿದೆ. 12ನೇ ತರಗತಿಯವರೆಗೂ ಟ್ಯೂಶನ್ ಫೀಯನ್ನು ವಿನಾಯತಿ ನೀಡಿದೆ. ಅಲ್ಲದೇ ಗ್ರಾಮೀಣ

ವೃದ್ಧಾಪ್ಯ ವೇತನ

60 ವರ್ಷಕ್ಕಿಂತಲೂ ಮೇಲ್ಪಟ್ಟು ವಯಸ್ಸಾಗಿರುವ, ನೋಡಿಕೊಳ್ಳಲು ಯಾರೂ ಇರದ ವೃದ್ಧರಿಗಾಗಿ ವೃದ್ಧಾಪ್ಯ ವೇತನ ಜಾರಿಗೆ ತಂದಿದ್ದು ಈ ಯೋಜನೆ ಪ್ರಕಾರ ತಲಾ 30ರೂ ವೃದ್ಧಾಪ್ಯ ವೇತನ ನೀಡಲಾಗುತ್ತಿದೆ. ಅಲ್ಲದೇ "ಹೀಯಾಂಗ" ಚಳುವಳಿಯಲ್ಲಿ ಪಾಲ್ಗೊಂಡವರಿಗೂ, ಅಂಗವಿಕಲರಿಗೂ ನಿವೃತ್ತಿವೇತನ ನೀಡಲು ನಿರ್ಧರಿಸಲಾಗಿದೆ. ಸರಕಾರಿ ನೌಕರಿಯಲ್ಲಿರುವ ಅಂಗವಿಕಲರಿಗೆ ಕನ್ವೆಯನ್ಸ್ ಭತ್ತೆ ಕೊಡಲಾಗುತ್ತಿದೆ.

ಸಹಕಾರ ಸಂಸ್ಥೆಗಳ ಮೂಲಕ, ಬೆಳೆಗಾರರಿಗೆ ಯೋಗ್ಯಬೆಲೆ ದೊರೆಕಿಸಲು ಜೂಟ್, ಭತ್ತ ಮತ್ತು ಬಟಾಟೆ ಇತ್ಯಾದಿಗಳನ್ನು ಖರೀದಿಸಲಾಗುತ್ತಿದೆ.

ಉದ್ಯೋಗಕ್ಕೆ ತೆಗೆದುಕೊಳ್ಳುವ, ಭಡ್ತಿ ಮತ್ತು ವರ್ಗಾವಣೆ ಬಗ್ಗೆ ನಿರ್ಧಿಷ್ಟ ಧೋರಣೆ ಅನುಸರಿಸಲಾಗುತ್ತಿದೆ. ಹರಿಜನ-ಗಿರಿಜನರಿಗಾಗಿ ಕಾಯ್ದಿರಿಸಲ್ಪಟ್ಟ ಸ್ಥಳಗಳನ್ನು ತುಂಬಲಾಗುತ್ತಿದೆ. ಸಂವಿಧಾನದ ಪ್ರಕಾರ ಪರಿಗಣನೆ ಇಲ್ಲದಿದ್ದಾಗ್ಯೂ ಅಲ್ಪಸಂಖ್ಯಾತರಾದ ಮುಸ್ಲಿಂರಿಗೂ, ಮಣಿಪುರಿಗಳಿಗೂ ವಿಶೇಷ ಗಮನ ನೀಡಲಾಗಿದೆ.

ತ್ರಿಪುರಾ : ಎಡರಂಗದ ಕಾರ್ಯಕ್ರಮಗಳ ಯಶಸ್ವೀ ಅನುಷ್ಠಾನ

ಕಠಿಣ ಕೆಲಸವೆಂಬುದನ್ನು ಎಡರಂಗವು ಪೂರ್ಣವಾಗಿ ಅರಿತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಹಿತವನ್ನು ರಕ್ಷಿಸಲು ರೂಪಿಸಲಾಗಿದ್ದ ಆಡಳಿತ ಯಂತ್ರವನ್ನು ಪುನಃರ್‌ಚಿಸದೇ ಇರುವುದೇ ಇದಕ್ಕೆ ಕಾರಣ. ಸ್ವಾತಂತ್ರ್ಯಾನಂತರವೂ ಈ ಆಧಿಕಾರಯಂತ್ರ ಗುತ್ತೇದಾರಿ ಬಂಡವಾಳಶಾಹಿಗಳನ್ನು ಮತ್ತಿತರ ಶೋಷಕರನ್ನು ರಕ್ಷಿಸಲು ಉಪಯೋಗಿಸುತ್ತಾ ಬರಲಾಗಿದೆ.

ತನ್ನ ಹೊಣೆಯನ್ನು ನಿರ್ವಹಿಸಲು ಅಧಿಕ ಭಾಗ ನೌಕರರ ಸಹಕಾರವನ್ನು ಎಡರಂಗ ಸರ್ಕಾರವು ಪಡೆಯಿತು. ರಾಜ್ಯದ ಬಹುಪಾಲು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನತೆಯು ಅಭಿವೃದ್ಧಿ ಕಾರ್ಯಕ್ರಮಗಳದಲ್ಲಿ ಪಾಲ್ಗೊಳ್ಳುವಂತೆ ಯತ್ನಿಸಲಾಯಿತು. ಈ ವಾಸ್ತವನ್ನು ಅರ್ಥಮಾಡಿಕೊಂಡು ಗ್ರಾಮಸಮಿತಿಗಳನ್ನು, ನೋಟಿಫೈಯ್ಡ ಎರಿಯಾಗಳನ್ನು ರಚಿಸಲಾಯಿತು. ಈ ಸಮಿತಿಗಳು ಅಭಿವೃದ್ಧಿ ಕಾರ್ಯಕ್ರಮಂಗಳಲ್ಲಿ ಪಾಲ್ಗೊಳ್ಳಲಾರಂಭಿಸಿದವು.

ಗ್ರಾಮೀಣ ಪುನಃರಾಭಿವೃದ್ಧಿ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿಗಳು ನಿರ್ವಹಿಸಿದ ಕಾರ್ಯಪ್ರಶಂಸನೀಯವಾದದ್ದು. 689 ಗ್ರಾಮ ಸಮಿತಿಗಳು ರಹಸ್ಯ ಮತದಾನ ಪದ್ಧ

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾದವು. ಈ ಎಲ್ಲ ಹೆಜ್ಜೆಗಳು ಆಡಳಿತ ಯಂತ್ರವನ್ನು ಜನತೆಯ ಸಮೀಪಕ್ಕೆ ಕೊಂಡೊಯ್ಯಲು ಸಮರ್ಥವಾದವು.

ಹಿಂದುಳಿದ ವರ್ಗಗಳು

ಸಮಾಜದಲ್ಲಿ ಅತ್ಯಂತ ಶೋಷಣೆಗೊಳಗಾಗಿರುವ, ನಿರ್ಲಕ್ಷಿಸಲ್ಪಟ್ಟಿರುವ ವರ್ಗಗಳಾದ ಹರಿಜನ-ಗಿರಿಜನ ಅಭಿವೃದ್ಧಿಗಾಗಿ ಮಹತ್ವದ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಎಡರಂಗ ಸರ್ಕಾರವು ಹರಿಜನ-ಗಿರಿಜನರಿಗಾಗಿ ಎರಡು ಸಹಕಾರಿ ಅಭಿವೃದ್ಧಿ ನಿಗಮಂಗಳನ್ನು ರಚಿಸಿತು.

ಇದರೊಟ್ಟಿಗೇ ರಾಜ್ಯದ ನಾನಾ ಕಡೆ ಮೀನುಗಾರರ ಸಹಕಾರಿ ನಿಗಮಂಗಳನ್ನು ರಚಿಸಲಾಯಿತು. ನಿಗಮಗಳಿಗೆ ಸರ್ಕಾರವು ಅನೇಕ ವಿಧದಲ್ಲಿ ನೆರವು ನೀಡಿತು. ಸರ್ಕಾರದ ನಿಯಂತ್ರಣದಲ್ಲಿದ್ದ ನೀರಾವರಿ ಪ್ರದೇಶಗಳನ್ನು ಸೊಸೈಟಿಗಳ ಸ್ವಾಧೀನಪಡಿಸಲಾಯಿತು. ಉದಯ್‌ಪುರ, ಅಮರಪುರ ಮತ್ತು ರುದ್ರಸಾಗರ ಪ್ರದೇಶಗಳು ಈಗ ಸೊಸಾಯಟಿಗಳ ನಿಯಂತ್ರಣದಲ್ಲಿವೆ. ಈ ಎಲ್ಲ ಕ್ರಮಂಗಳು ಹೊಸ ಬದುಕಿಗೆ ನಾಂದಿಯಾಗತೊಡಗಿದವು. ಹರಿಜನರ ಪುನರ್ವಸತಿಯು

ರಚಿಸಲಾಯಿತು. ಕಳೆದ ಜೂನ್‌ನಲ್ಲಿ ನಡೆದ ಗಲಭೆಗಳ ಕಾರಣವಾಗಿ ನಿಗದಿಯಾಗಿದ್ದ ಚುನಾವಣೆಗಳು ನಡೆಯಲಿಲ್ಲ. ಗುಡ್ಡಗಾಡು ಜನರ ಹಿತ ಎತ್ತಿಹಿಡಿಯುವ ಕೆಲವು ಕಾನೂನುಗಳು ಕೆಲವು ಜನರಿಗೆ ಸಹ್ಯವಾಗದಿದ್ದರೂ, ಸರ್ಕಾರವು ಧೃಢವಾಗಿ ಮುಂದುವರೆಯಿತು.

ಹಿಂದಿನ ಸರ್ಕಾರಗಳು, ಪಟ್ಟಬದ್ಧ ಹಿತಾಸಕ್ತಿಗಳ ಕೈಗೊಂಬೆಯಾಗಿ ಗುಡ್ಡಗಾಡಿನ ಹಿತರಕ್ಷಣೆಯನ್ನು ನಿರ್ಲಕ್ಷಿಸಿದ್ದವು. ಎಡರಂಗ ಸರ್ಕಾರವು ಗುಡ್ಡಗಾಡು ಜನರ ಮತ್ತು ಇತರ ಅಲ್ಪಸಂಖ್ಯಾತ ವರ್ಗಗಳ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗೆ ಕಂಕಣ ಬದ್ಧವಾಯಿತು. ಈ ಕ್ರಮಗಳು ಗುಡ್ಡಗಾಡಿನ ಜನರ ಮತ್ತು ಅಲ್ಪಸಂಖ್ಯಾತರ ಪ್ರಜಾಪ್ರಭುತ್ವ ಹಕ್ಕುಗಳನ್ನು ಎತ್ತಿಹಿಡಿದು ರಾಷ್ಟ್ರೀಯ ಸೌಹಾರ್ದತೆ ಮೂಡುವಂತೆ ಮಾಡಲು ಸಫಲವಾದವು.

ಗುಡ್ಡಗಾಡು ಜನತೆಯ ಭಾಷೆ

ರಾಜ್ಯದ ಬಹುಸಂಖ್ಯಾತ ಗುಡ್ಡಗಾಡು ಜನರು ಮಾತಾಡುವ ಭಾಷೆ "ಕೊಕ್‌ಬೊರೊಕ್". ಎಡರಂಗ ಸರ್ಕಾರವು ಈ ಭಾಷೆಯನ್ನು ರಾಜ್ಯ ಭಾಷೆಯಾಗಿ ಅಂಗೀಕರಿಸಿತು. ಪ್ರಾಥ

ಪ್ರದೇಶದಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ 5ನೇ ತರಗತಿಯ ಮಕ್ಕಳವರೆಗೆ 50ಪೈಸೆ ದರದಲ್ಲಿ ತಿಂಡಿ ಒದಗಿಸಲಾಗುತ್ತಿದೆ. ಸರ್ಕಾರ ಈ ವ್ಯವಸ್ಥೆಗಾಗಿ ವರ್ಷಕ್ಕೆ ಒಂದು ಕೋಟಿ ರೂ. ಮೀಸಲಾಗಿಟ್ಟಿದೆ.

ಎಲ್ಲ ಕ್ರಮಗಳು ಬಡ ವಿದ್ಯಾರ್ಥಿಗಳಿಗೆ ತುಂಬ ಪ್ರಯೋಜನಕಾರಿಯಾಗಿವೆ. ಇದರೊಟ್ಟಿಗೇ ಹಾಸ್ಟೆಲ್‌ಗಳಲ್ಲಿ ವಾಸಿಸುವ ಹರಿಜನ-ಗಿರಿಜನ ವಿದ್ಯಾರ್ಥಿಗಳಿಗೆ ಸ್ಟೈಫಂಡನ್ನು 60ರೂಯಿಂದ 90ರೂಗೆ ಏರಿಸಲಾಗಿದೆ. ಶಿಕ್ಷಕರ ಕೊರತೆಯಿದ್ದರೂ 1595 ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಿಗಾಗಿ ತೆಗೆದುಕೊಳ್ಳಲಾಗಿದೆ. 242 ಹೊಸ ಜ್ಯೂನಿಯರ್ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, 18,860 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. 600 ಹೊಸ ಬಾಲವಾಡಿಗಳನ್ನು ತೆರೆಯಲಾಗಿದೆ.

ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ 3 ಹೊಸ ಕಾಲೇಜುಗಳನ್ನು ತೆರೆಯಲಾಗಿದ್ದು ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ಅಗರ್ತಲಾದಲ್ಲಿ ತರೆಯಲು ಪ್ರಯತ್ನಗಳು ನಡೆದಿವೆ.

ಗಣನೆಗೆ ತೆಗೆದುಕೊಳ್ಳಲೇಬೇಕಾದ ಅಂಶವೆಂದರೆ, ಹೋರಾಟಗಳ ಮೂಲಕವೇ ಎಡರಂಗ ಸರ್ಕಾರವು ಅಧಿಕಾರಕ್ಕೆ ಬಂದಿದ್ದು ಹೋರಾಟಗಳ ಮೂಲಕವೇ ಕಾರ್ಯಕ್ರಮಂಗಳನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಜನತೆಯ ಸರ್ಕಾರದ ಹಿಂದಿನ ಶಕ್ತಿ. ಪಟ್ಟಭದ್ರರೂ, ಪ್ರತಿಗಾಮಿಗಳೂ, ಸರ್ಕಾರದ ಪುರೋಗಾಮಿ ಕಾರ್ಯಕ್ರಮಗಳಿಗೆ ಅನೇಕ ವಿಧವಾದ ಅಡಚಣೆ ಉಂಟುಮಾಡುತ್ತಿದ್ದರೂ ಸರ್ಕಾರ ಧೃಢತೆಯಿಂದ ಕಾರ್ಯತತ್ಪರವಾಗಿದೆ. ಜೂನ್‌ನಲ್ಲಿ ನಡೆದ ಕರಾಳ ಹತ್ಯಾಕಾಂಡ ಪ್ರತಿಗಾಮಿಗಳ ಚಟುವಟಿಕೆಗೆ ನಿದರ್ಶನ. ರಾಜ್ಯದ ಪ್ರಜಾಪ್ರಭುತ್ವ ಶಕ್ತಿಗಳ ಪೂರ್ಣಬೆಂಬಲದಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲಾಗಿದ್ದು, ಜನತೆಯ ಬದುಕನ್ನು ಸುಖಮಯ ಮಾಡಲು ತ್ರಿಪುರಾದ ಎಡರಂಗ ಸರ್ಕಾರ ಸರ್ವತೋಮುಖ ಪ್ರಯತ್ನ ನಡೆಸುತ್ತಿದೆ.

○

ಚಂದಾ ವಿವರ

ವಾರ್ಷಿಕ ಚಂದಾ	: 25ರೂ.
6 ತಿಂಗಳಿಗೆ	: 13ರೂ.
ಬಿಡಿ ಪ್ರತಿ	: 50 ಪೈಸೆ

ಏನಿದು ಈ "ಸಹಕಾರ"ದ ಕರೆ?

ಇ. ಎಂ. ಎಸ್.

ಪ್ರಧಾನಮಂತ್ರಿಯವರು ಈಗೀಗ ದೇಶದ ಎಲ್ಲಾ ಅನಿಷ್ಟಗಳಿಗೆ ಜನತಾ ಪಕ್ಷದ ಹಾಗೂ ಲೋಕದಳ-ಕಾಂಗ್ರೆಸ್ (ಯು) ಪಕ್ಷಗಳ ಮೂರುವರ್ಷಗಳ ಆಡಳಿತವೇ ಕಾರಣ ಎನ್ನುವುದನ್ನು ಬಿಟ್ಟಿದ್ದಾರೆ. ಜನತಾ ಹಾಗೂ ಅದರ ಅದರ ನಂತರದ ಸರ್ಕಾರ ಮೂರೇ ವರ್ಷ ಅಧಿಕಾರದಲ್ಲುಳಿದಿದ್ದರೆ ಆಕೆಯ ಪಕ್ಷ ಮೂವತ್ತು ವರ್ಷಗಳ ಕಾಲ ದೇಶದ ಮೇಲೆ ಹತೋಟಿ ಹೊಂದಿದ್ದು ಈಗ ಮತ್ತೆ ಒಂದು ವರ್ಷದಿಂದ ಪೀಠದಲ್ಲಿದೆ ಎಂದು ಆಕೆಗೆ ಮನವರಿಕೆಯಾಗಿರುವುದೇ ಇದಕ್ಕೆ ಕಾರಣವಿರಬಹುದೇ?

ಅದೇನೇ ಇರಲಿ, ಅವರು ದಾಳಿ ಮಾಡಲು ಹೊಸದೊಂದು ಗುರಿಯನ್ನು ಕಂಡುಕೊಂಡಿದ್ದಾರೆ. ವಿರೋಧ ಪಕ್ಷಗಳೇ ಆ ಗುರಿ. ಅಸ್ಸಾಂ ಚಳುವಳಿಗೆ ಬೆಂಬಲಕೊಡುವ, ಮುಸ್ಲಿಂ-ವಿರೋಧೀ ದಂಗೆಗಳಿಗೆ ನೆಪಗಳನ್ನು ಒದಗಿಸುವ ಭಾರತೀಯ ಜನತಾ ಪಕ್ಷ ಹಾಗೂ ದಂಗೆಗಳನ್ನು ಅಡಗಿಸಲು ಕ್ರಮ ಕೈಕೊಂಡರೆ ಹಾಗೂ ಅಸ್ಸಾಂನಲ್ಲಿ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಇವರಿಬ್ಬರಿಗೂ ಸ್ವೀಕಾರಾರ್ಹವಾಗುವ ಪರಿಹಾರ ಸೂಚಿಸಿದರೆ ತಾವು ಸರ್ಕಾರಕ್ಕೆ ಬೆಂಬಲ ಕೋರುತ್ತೇವೆ ಎಂದು ಸಾರಿದ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳು ಇವೆರಡೂ ಆಕೆಯ ದೃಷ್ಟಿಯಲ್ಲಿ ಒಂದೇ. ಈ ಎರಡೂ ವಿಧದ ವಿರೋಧ ಪಕ್ಷಗಳ ಮೇಲೆ "ಸರ್ಕಾರದೊಡನೆ ಅಸಹಕಾರ", "ಹಿಂಸಾತ್ಮಕ ಚಳುವಳಿಗಳಿಗೆ ಬೆಂಬಲ ನೀಡುವುದು" ಇತ್ಯಾದಿ ಆರೋಪಗಳನ್ನು ಸಮ-ಸಮವಾಗಿ ಹೊರಿಸಲಾಗಿದೆ.

ಜನವರಿ 21ರಂದು ಅಹಮದಾಬಾದಿನಲ್ಲಿ ಮಾತನಾಡುತ್ತಾ ತನ್ನ ಸರ್ಕಾರ "ಹೊರಗಿನಿಂದ ಅಪಾಯ ಎದುರಿಸುತ್ತಿರುವಾಗ ದೇಶವನ್ನು ಬಲಪಡಿಸುವುದಕ್ಕಾಗಿ ಜಾತ್ಯಾತೀತತೆ, ಭಾಷಾ ಸಮಸ್ಯೆ ಹಾಗೂ ಅಸ್ಸಾಂ ಕಗ್ಗಂಟು ಇತ್ಯಾದಿ ಕೆಲವು ಮಹತ್ವದ ವಿಷಯಗಳನ್ನು ಕುರಿತಂತೆ ವಿರೋಧ ಪಕ್ಷಗಳೊಂದಿಗೆ ಒಮ್ಮತಕ್ಕೆ ಬರಲು ತಯಾರಿದೆ" ಎಂದಿದ್ದರು.

ಬುಡವಿಲ್ಲದ ಆರೋಪ

ಆದರೆ ಜನವರಿ 23ರಂದು ನಾಲ್ಕು ಎಡಪಕ್ಷಗಳ ಸಂಸದೀಯ ನಾಯಕರರಾದ ಸಿ.ಪಿ.ಐ.(ಎಂ.)ನ ಸಮರ್ ಮುಖರ್ಜಿ, ಸಿ.ಪಿ.ಐ.ನ ಭೂಪೇಶ್ ಗುಪ್ತ, ಆರ್.ಎಸ್.ಪಿ.ಯ ತ್ರಿದೀಬ್ ಚೌಧುರಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ಚಿತ್ತಬಸು ನೀಡಿದ ಜಂಟೀ ಹೇಳಿಕೆಯಲ್ಲಿ ಸೂಚಿಸಿದಂತೆ "ವಿರೋಧ ಪಕ್ಷಗಳ ನಾಯಕರೊಂದಿಗೆ ಆಕೆಯ ಭೇಟಿಗಳಿಗೆ ವಿರೋಧ ಪಕ್ಷಗಳು ಬಹಿಷ್ಕಾರ ಹಾಕುತ್ತವೆ ಎಂಬ ತೀವ್ರ ಆರೋಪ ಬುಡವಿಲ್ಲದ್ದು. ಇಂತಹ ಭೇಟಿಗಳನ್ನು ಕೇವಲ ಔಪಚಾರಿಕ ಮಟ್ಟಿಗಿಳಿಸಲಾಗಿದ್ದರೂ ಆಕೆ ಕರೆದು, ಎಡಪಕ್ಷಗಳಿಗೆ ಸೇರಿದ ನಾವು ಮತ್ತು ಇತರ ಪಕ್ಷಗಳವರು ಭಾಗವಹಿಸದೇ ಇದ್ದ ಒಂದಾದರೂ ಇಂತಹ ಸಂದರ್ಭವನ್ನು ಹೆಸರಿಸಲಿ."

ಇಲ್ಲಿ ಇನ್ನೂ ಒಂದು ವಿಚಾರ ಸೇರಿಸಬಹುದು. ಅಸ್ಸಾಂ ಹಾಗೂ ರಾಷ್ಟ್ರೀಯ ಭಾವೈಕ್ಯತೆಯ ಸಮಸ್ಯೆಗಳನ್ನು ಕುರಿತು ಪ್ರಧಾನಮಂತ್ರಿಯವರು ಏರ್ಪಡಿಸಿದ ಮಾತುಕತೆಗಳಲ್ಲಿ ಬಹುತೇಕ ವಿರೋಧ ಪಕ್ಷಗಳು ಸಂಪೂರ್ಣ ಸಹಕಾರವನ್ನು ನೀಡಿದವು. ಅಸ್ಸಾಂ ವಿಷಯದಲ್ಲಂತೂ ಸಭೆಯಲ್ಲಿ ಭಾಗವಹಿಸಿದ್ದ ಹೆಚ್ಚಿನವರು ಸರ್ಕಾರದೊಡನೆ ಸಹಮತಿ ಹೊಂದಿದ್ದರು. ರಾಷ್ಟ್ರೀಯ ಭಾವೈಕ್ಯತಾ ಸಮಿತಿಯಲ್ಲೂ ವಿರೋಧ ಪಕ್ಷಗಳ ನಾಯಕರು ಕೆಲವು ರಚನಾತ್ಮಕ ಸೂಚನೆಗಳನ್ನು ಕೊಟ್ಟಿದ್ದು ಇವು ಸರ್ಕಾರ ಸೂಕ್ತ ಕ್ರಮ ರೂಪಿಸುವುದಕ್ಕೆ ಆಧಾರವಾಗಬಹುದಿತ್ತು. ಹೀಗಿದ್ದರೂ ಪದೇಪದೇ ಸರ್ಕಾರದೊಡನೆ 'ಸಹಕರಿಸುತ್ತಿಲ್ಲ' ಎಂಬ ಈ ಆರೋಪ ಏಕೆ?

ಮೇಲೆ ಹೇಳಿದ ನಾಲ್ಕು ವಿರೋಧೀ ನಾಯಕರ ಜಂಟೀ ಹೇಳಿಕೆಯಲ್ಲಿ "ಸರಿಯಾದ ನಿಲುವಿನ ಆಧಾರದ ಮೇಲೆ ಸರ್ಕಾರ ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳ ನಡುವೆ ಒಮ್ಮತ ಹಾಗೂ ಸಹಕಾರ ಸಾಧ್ಯವಾಗಬಹುದಾದ ಕೆಲವು ವಿಚಾರಗಳಿವೆ. ಉದಾಹರಣೆಗೆ, ದೇಶದ ಭದ್ರತೆ, ರಾಷ್ಟ್ರೀಯ ಐಕ್ಯತೆ, ಕೋಮು ಸಾಮರಸ್ಯ, ಅಸ್ಸಾಂ ಬಿಕ್ಕಟ್ಟು ಇತ್ಯಾದಿ" ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ನಾವು ತಪ್ಪಿತಸ್ಥರು

ಆದರೆ ಪ್ರಧಾನಮಂತ್ರಿಯವರು ಸಾರ್ವಜನಿಕವಾಗಿ ವಿರೋಧಿಗಳು ಸಹಕಾರ ಕೊಡಬೇಕೆಂದು ಕೇಳುವಾಗ ಅವರ ಅಭಿಪ್ರಾಯ ಇದಲ್ಲ. ನಿಜವಾಗಿ, ವಿರೋಧ ಪಕ್ಷಗಳ ಮೇಲೆ ಆಕೆಯ ಆರೋಪವೆಂದರೆ ಅವರು ರೈತರ ಚಳುವಳಿಯೂ ಸೇರಿದಂತೆ ಎಲ್ಲಾ ಚಳುವಳಿಗಳನ್ನು ಬೆಂಬಲಿಸುತ್ತಾರೆ ಎಂಬುದು.

ಇದೂ ಒಂದು ಆರೋಪವೆಂದರೆ ಎಡವಿರೋಧಿ ಪಕ್ಷಗಳಾದ ನಾವು ನಿಸ್ಸಂಶಯವಾಗಿ ತಪ್ಪೊಪ್ಪಿಕೊಳ್ಳುತ್ತೇವೆ. ನಾವು ಕೈಗಾರಿಕಾ ಕಾರ್ಮಿಕರು ಮತ್ತು ಮಧ್ಯಮ ವರ್ಗದ ನೌಕರರು, ರೈತರು ಮತ್ತು ಕೃಷಿ ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಹಾಗೂ ಸಣ್ಣ ಕೈಗಾರಿಕೋದ್ಯಮಿಗಳು, ಕಸಬುದಾರರು ಇತ್ಯಾದಿಯವರ ಹೋರಾಟಗಳಿಗೆ ಸಂಪೂರ್ಣ ಬೆಂಬಲ ಕೊಡುತ್ತೇವೆ. ಯಾಕೆಂದರೆ ಅವರೇ "ಜನಸಾಮಾನ್ಯರು" ಇವರ ಸೇವೆಗಾಗಿಯೇ ನಾವು ನಮ್ಮನ್ನು ಸಮರ್ಪಿಸಿಕೊಂಡಿದ್ದೇವೆ.

ಪ್ರಧಾನಮಂತ್ರಿಯವರ "ರೈತರ ಚಳುವಳಿಯೂ ಸೇರಿದಂತೆ" ಎಂಬ ಪದಪ್ರಯೋಗ ಕುತೂಹಲ ಕೆರಳಿಸುತ್ತದೆ. ಕೈಗಾರಿಕಾ ಮತ್ತು ಕೃಷಿ ಕಾರ್ಮಿಕರು ವೇತನ ಪಡೆಯುವ ನೌಕರರು, ಸಣ್ಣ ಆಸ್ತಿದಾರರು ಇತ್ಯಾದಿಯವರೊಂದಿಗೆ ರೈತರ ಹೋರಾಟಗಳಿಗೂ ನಾವು ಬೆಂಬಲ ಕೊಡುವುದು ಅಷ್ಟೊಂದು ಪಾಪಕರವೇ?

ನಿಜವಾಗಿ, ಯಾವ ಬೇಡಿಕೆಗಳ ಆಧಾರದ ಮೇಲೆ ನಾವು ರೈತರ ಹೋರಾಟಗಳನ್ನು ಬೆಂಬಲಿಸುತ್ತೇವೋ ಅವುಗಳಲ್ಲಿ ಕೃಷಿ ಉತ್ಪನ್ನಗಳಿಗೆ ಬೆಲೆ, ಕೃಷಿ ಕಾರ್ಮಿಕರಿಗೆ ಕೂಲಿ ಹೆಚ್ಚಳ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ಸರಕುಗಳ ಬೆಲೆಯ ಹತೋಟಿ ಇತ್ಯಾದಿ ಕೂಡಾ ಸೇರಿವೆ ಎಂಬುದು ಎಲ್ಲರಿಗೂ ತಿಳಿದಿದೆ. ನಮ್ಮ ನಾರಾಯಣಸ್ವಾಮಿ ನಾಯುಡುಗಳು, ರುದ್ರಪ್ಪಗಳು ಹಾಗೂ ಶರದ್ ಜೋಷಿಗಳು ನೇತೃತ್ವ ವಹಿಸಿದ ರೈತ ಚಳವಳಿಗಳಂತಾಗಿರದೆ, ನಾವು ಬೆಂಬಲ ಸೂಚಿಸುವುದು ಗ್ರಾಮಾಂತರ ಹಾಗೂ ನಗರದ ದುಡಿಯುವ ಜನರ ಎಲ್ಲಾ ವಿಭಾಗಗಳ ಹೋರಾಟಗಳಿಗೆ.

ನಮ್ಮ ಸರಳ ಉತ್ತರ

ಇದು ಸಹಜವಾಗಿಯೇ ಹಲವು ಪ್ರಶ್ನೆಗಳನ್ನೆಬ್ಬಿಸುತ್ತದೆ. ಈ ಪ್ರಶ್ನೆಗಳನ್ನು ಕುರಿತಂತೆ ಆಳುವ ವರ್ಗಗಳು ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಭಿನ್ನಾಭಿಪ್ರಾಯ ಹೊಂದಿವೆ. ನಾವು ಏಕ ಕಾಲದಲ್ಲಿ ಕೃಷಿ ಉತ್ಪನ್ನಗಳಿಗೆ ಹೆಚ್ಚು ಬೆಲೆ ಕೇಳುವುದು ಮತ್ತು ಪೂರೈಕೆಯ ಬೆಲೆಗಳನ್ನು ಹೆಚ್ಚಿಸಬಾರದೆಂದು ಕೇಳುವುದು ಆಳುವವರ್ಗಗಳ ಮಟ್ಟಿಗೆ ಬೇಜವಾಬ್ದಾರಿತನವೆಂದು ಕಂಡುಬರುತ್ತದೆ; ಅದೇ ರೀತಿ ಉಳುಮೆದಾರ ಒಡೆಯರು ಹಾಗೂ ಕೃಷಿ ಕಾರ್ಮಿಕರ ಇವರಿಬ್ಬರ ಕೇಳಿಕೆಗಳನ್ನು ಬೆಂಬಲಿಸುವಲ್ಲಿ ಅವರಿಗೆ ವಿರೋಧಾಭಾಸ ಕಾಣುತ್ತದೆ.

ನಮ್ಮ ಸರಳ ಉತ್ತರವೆಂದರೆ ಕೃಷಿ ಉತ್ಪಾದಕರು ಮತ್ತು ಆಹಾರ ಧಾನ್ಯಗಳ ಬಳಕೆದಾರರ ನಡುವೆಯಾಗಲೀ ಅಥವಾ ಭೂಮಿ ಹೊಂದಿರುವ ಬೇಸಾಯಗಾರರು ಹಾಗೂ ಕೃಷಿಕಾರ್ಮಿಕರ ನಡುವೆಯಾಗಲೀ ವೈರುಧ್ಯವಿಲ್ಲ. ನಿಜವಾದ ವೈರುಧ್ಯವಿರುವುದು, ಒಂದೆಡೆ ಕೃಷಿಕಾರ್ಮಿಕರು, ಬಡರೈತರು, ಮಧ್ಯಮ ರೈತರು ಹಾಗೂ ಹಳ್ಳಿ, ಪಟ್ಟಣಗಳಲ್ಲಿರುವ ಇತರ ದುಡಿಯುವ ಜನವಿಭಾಗಗಳು ಹಾಗೂ ಇನ್ನೊಂದೆಡೆ ಭೂಮಾಲೀಕರು, ಲೇವಾದೇವಿಗಾರರು ಸಗಟು ವ್ಯಾಪಾರಸ್ಥರು ಹಾಗೂ ಏಕಸ್ವಾಮ್ಯ ಬಂಡವಾಳಿಗರ ಸಂಕುಚಿತ ಗುಂಪು ಇವೆರಡರ ನಡುವೆ. ಎಡ ಮತ್ತು ಪ್ರಜಾಪ್ರಭುತ್ವವಾದೀ ಚಳುವಳಿಗೆ ಸೇರಿದ ನಾವು ದುಡಿಯುವ ಜನರ ಈ ಎಲ್ಲ ವಿಭಾಗಗಳ ಪ್ರತ್ಯೇಕ ಹೋರಾಟಗಳನ್ನು ಸಮಗ್ರೀಕರಿಸಿ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಸಂಯುಕ್ತ ಚಳುವಳಿಯಾಗಿಸಲು ನಮ್ಮಿಂದಾದ ಎಲ್ಲ ಪ್ರಯತ್ನಗಳನ್ನೂ ನಡೆಸುತ್ತೇವೆ.

ಆದ್ದರಿಂದ ಆಳುವಪಕ್ಷ ಎಡ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳಿಂದ ಸರಿಹೊಂದಿಸಲಾಗದಷ್ಟು ತೀವ್ರವಾದ ವಿರೋಧ ಅಭಿಪ್ರಾಯವನ್ನು ಹೊಂದಿರುವ ಮೂಲಭೂತ ಆರ್ಥಿಕ ಧೋರಣೆಗೆ ಸಂಬಂಧಿಸಿದ ಒಂದು ಪ್ರಶ್ನೆ ಇಲ್ಲಿದೆ. ಅಲ್ಲದೆ ಎಡ ಪಕ್ಷಗಳು ಮಾತ್ರವಲ್ಲ ಪ್ರಜಾಪ್ರಭುತ್ವವಾದೀ ಸಾರ್ವಜನಿಕ ಅಭಿಪ್ರಾಯದ ವಿಶಾಲ ಸಮೂಹವೂ ವಿರೋಧಿಸಿರುವ ಆಳುವ ಪಕ್ಷದ ಹಲವು ರಾಜಕೀಯ ಹಾಗೂ ಆಡಳಿತಾತ್ಮಕ ಕ್ರಮಗಳನ್ನೂ ನಾವು ವಿರೋಧಿಸುತ್ತೇವೆ.

ನ್ಯಾಯಾಧೀಶರ ವರ್ಗಾವಣೆ

ಉದಾಹರಣೆಗೆ ಪಟ್ನಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಮದ್ರಾಸ್ಸಿಗೆ ಹಾಗೂ ತಮಿಳುನಾಡಿನ ಮುಖ್ಯ ನ್ಯಾಯಾಧೀಶರನ್ನು ಕೇರಳಕ್ಕೆ ವರ್ಗಮಾಡುವ ಸರ್ಕಾರದ ನಿರ್ಧಾರದ ವಿರುದ್ಧವಾಗಿ ಎದ್ದ ವ್ಯಾಪಕ ರೋಷವನ್ನು ಗಮನಿಸಿ. ತಮಿಳುನಾಡಿನ ಮುಖ್ಯ ನ್ಯಾಯಾಧೀಶರು ಈಗಾಗಲೇ ರಾಷ್ಟ್ರಪತಿಗಳಿಗೆ ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ; ಅವರು ಅದನ್ನು ಪ್ರಧಾನಮಂತ್ರಿಗಳಿಗೆ ಕಳಿಸಿದ್ದಾರೆ ಎಂದು ವರದಿಯಾಗಿದೆ. ಪಟ್ನಾ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೂ ಈ ಬಗ್ಗೆ ತಮ್ಮದೇ ಅಭಿಪ್ರಾಯವಿರುವಂತಿದೆ. ಅವರಿನ್ನೂ ಈ ವರ್ಗಾವಣೆ ಬಗ್ಗೆ ಏನೂ ಹೇಳಿಲ್ಲ.

ಈ ಎರಡು ವರ್ಗಾವಣೆಗಳ ಒಂದು ಪರಿಣಾಮವೆಂದರೆ ಕ್ರಮವಾಗಿ ಕೇರಳದ ಮುಖ್ಯ ನ್ಯಾಯಾಧೀಶರಾಗಿ ಭಡ್ತಿ ಹೊಂದಬೇಕಾದವರ ನ್ಯಾಯಬದ್ಧ ಅವಕಾಶವನ್ನು ನಿರಾಕರಿಸಿದಂತಾಗಿದೆ. ಈ ರೀತಿ ಅವಕಾಶ ನಿರಾಕರಿಸಲ್ಪಟ್ಟು ಕೇರಳ ಹೈಕೋರ್ಟಿನ ನ್ಯಾಯಾಧೀಶರು ಏಪ್ರಿಲ್ 1977 ತಮ್ಮ ಒಂದು ತೀರ್ಪಿನ ಮೂಲಕ ಆಗ ಕೇರಳದ ಮುಖ್ಯಮಂತ್ರಿಯಾಗಿದ್ದ, ಈಗ ಕಾಂಗ್ರೆಸ್ (ಐ) ವಿರೋಧ ಪಕ್ಷದ ನಾಯಕರಾಗಿರುವ ಕೆ. ಕರುಣಾಕರನ್ ರಾಜೀನಾಮೆ ಕೊಡುವಂತೆ ಮಾಡಿದ ನ್ಯಾಯಾಧೀಶರೇ ಎಂದು ಗೊತ್ತಿದ್ದವರಿಗೆ ವರ್ಗಾವಣೆ ವ್ಯವಹಾರದ ಕೊನೆಯ ಅಂಶದ ಮಹತ್ವವನ್ನು ಬೇರೆ ಹೇಳಬೇಕಾಗಿಲ್ಲ.

ತುರ್ತುಪರಿಸ್ಥಿತಿಯ ಆಡಳಿತ ನ್ಯಾಯಾಂಗ ಸಿಬ್ಬಂದಿಯಲ್ಲಿ ಭಯದ ಭಾವನೆ ಹುಟ್ಟಿಸಿ ಅವರನ್ನು 'ಬದ್ಧ' ನ್ಯಾಯಾಂಗದ ಸದಸ್ಯರನ್ನಾಗಿಸಲು ನ್ಯಾಯಾಧೀಶರನ್ನು ವರ್ಗಮಾಡುವ ವಿಧಾನವನ್ನು ಅನುಸರಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆಗ ಧೋರಣೆಯಿನ್ನು ಕೈಬಿಡಬೇಕೆಂಬುದು ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳ ಒಂದು ಕಾರ್ಯಾಂಗವಾಗಿತ್ತು. ಆದ್ದರಿಂದ ನ್ಯಾಯಾಂಗ, ವಕೀಲವೃಂದ ಹಾಗೂ ಪ್ರಜಾಪ್ರಭುತ್ವವಾದೀ ಜನಸಾಮಾನ್ಯರು ಜನತಾ ಪಕ್ಷದ ಸರ್ಕಾರ ತುರ್ತು ಪರಿಸ್ಥಿತಿ ಆಡಳಿತದ ಇತರ ಹಲವು ಕ್ರಮಗಳೊಂದಿಗೆ ಇದನ್ನೂ ಕಿತ್ತು ಹಾಕಿದಾಗ ಸಮಾಧಾನದ ನಿಟ್ಟುಸಿರು ಬಿಟ್ಟರು. ಆದರೆ ಈಗಿನ ಸರ್ಕಾರ 1977ರಲ್ಲಿ ತಪ್ಪಿಹೋದ ಎಳೆಯನ್ನು ಮತ್ತೆ ಕೈಗೆತ್ತಿಕೊಳ್ಳುತ್ತಿರುವಂತೆ ಕಾಣುತ್ತದೆ. ಆದ್ದರಿಂದಲೇ ಇದಕ್ಕೆ ಪ್ರಜಾಪ್ರಭುತ್ವವಾದೀ ಸಾರ್ವಜನಿಕರು ಹಾಗೂ ನ್ಯಾಯವಾದಿಗಳಿಂದ ಸಾರ್ವತ್ರಿಕ ಪ್ರತಿಭಟನೆ ಬರುತ್ತಿದೆ.

ವಿರೋಧ ಮುಂದುವರಿಯುತ್ತದೆ

ಎಡ ಹಾಗೂ ಪ್ರಜಾಪ್ರಭುತ್ವವಾದೀ ಚಳವಳಿಗೆ ಸೇರಿದ ನಾವು ಈ ಎಲ್ಲಾ ವಿಚಾರಗಳನ್ನು ಪ್ರಜಾಪ್ರಭುತ್ವವನ್ನು ರಕ್ಷಿಸುವುದಕ್ಕಾಗಿ ಕೈಗೆತ್ತಿಕೊಳ್ಳುತ್ತೇವೆ ಮತ್ತು ರಾಜಕೀಯ ವಿಷಯಗಳ ಮೇಲಿನ ಹೋರಾಟಗಳನ್ನು ದುಡಿಯುವ ವರ್ಗ, ಮಧ್ಯಮ ವರ್ಗದ ನೌಕರರು, ರೈತಾಪಿ ವರ್ಗ ಹಾಗೂ ಇತರ ದುಡಿಯುವ ಜನವಿಭಾಗಗಳು ತಮ್ಮ ಆರ್ಥಿಕ ಹಿತರಕ್ಷಣೆಗಾಗಿ ನಡೆಸುತ್ತಿರುವ ಚಳವಳಿಗಳೊಂದಿಗೆ ಸಮಗ್ರೀಕರಿಸುತ್ತೇವೆ.

ನಾಲ್ಕು ಎಡಪಂಥೀಯ ನಾಯಕರು ತಮ್ಮ ಜಂಟೀ ಹೇಳಿಕೆಯಲ್ಲಿ ಹೇಳಿರುವಂತೆ "ನಾವು ಸರ್ಕಾರದ ಎಲ್ಲಾ ಪ್ರಜಾಪ್ರಭುತ್ವ ವಿರೋಧಿ, ಜನವಿರೋಧಿ ಧೋರಣೆಗಳನ್ನು ಹಾಗೂ ಕ್ರಮಗಳನ್ನು ವಿರೋಧಿಸುತ್ತಾ ಬಂದಿದ್ದೇವೆ ಎಂಬುದನ್ನು ನಿರಾಕರಿಸುವುದಿಲ್ಲ ಮತ್ತು ನಾವು ಇದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ರಾಷ್ಟ್ರೀಯ ಭದ್ರತಾ ಕಾನೂನಿನಂತಹ ಕಾನೂನುಬಾಹಿರ ಕಾನೂನನ್ನು ಅಥವಾ ಜನರ ಪ್ರಜಾಸತ್ತಾತ್ಮಕ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ದಮನಿಸುವ ಇಂತಹ ಇತರ ಕ್ರಮಗಳನ್ನು ಅಂಗೀಕರಿಸುವಲ್ಲಿ ನಾವು

(7ನೇ ಪುಟ ನೋಡಿ)

ಪಶ್ಚಿಮ ಬಂಗಾಳ : ಸಮರಶೀಲ ಬ್ಯಾಂಕ್ ನೌಕರರ ಹೊಸ ಸಂಘಟನೆ

ವರ್ಗ ಸಹಕಾರ ಧೋರಣೆಯನ್ನು ಅನುಸರಿಸುತ್ತಿದ್ದ ಎ. ಐ. ಬಿ. ಇ. ಎ. (All India Bank Employees Association)ನ ನಾಯಕತ್ವವನ್ನು ತೊರೆದು ಪಶ್ಚಿಮ ಬಂಗಾಳದ ಬ್ಯಾಂಕ್ ನೌಕರರು ಸಮರಶೀಲ ಸಂಘಟನೆಯ ಆರಂಭಕ್ಕೆ ನಾಂದಿ ಹಾಕಿದ್ದಾರೆ. ಜನವರಿ 16ರಿಂದ 18ರ ವರೆಗೆ ಕಲಕತ್ತಾದಲ್ಲಿ ನಡೆದ ರಾಜ್ಯಮಟ್ಟದ ಸಮ್ಮೇಳನದಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡು "ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್, ಪಶ್ಚಿಮ ಬಂಗಾಲ" ಎಂಬ ಹೊಸ ಸಂಘಟನೆ ಆರಂಭಿಸುವ ನಿರ್ಧಾರ ಕೈಗೊಳ್ಳಲಾಯಿತು.

ಬ್ಯಾಂಕ್ ನೌಕರರು ಈ ನಿರ್ಧಾರ ಕೈಗೊಳ್ಳಲು ಸ್ವತಃ ಎ. ಐ. ಬಿ. ಇ. ಎ.ನ ನಾಯಕರೇ ಕಾರಣ. ಸ್ವಾರ್ಥಿಗಳು, ಸಂದರ್ಭಸಾಧಕ ನಾಯಕತ್ವದಎ.ಐ.ಬಿ.ಇ.ಎ.ಗೆ ಬದಲಾಗಿ ಸಮರಶೀಲ ಸಂಘಟನೆ ಆರಂಭಿಸುವ ದಿಶೆಯಲ್ಲಿ ಬ್ಯಾಂಕ್ ನೌಕರರು ಅನಿವಾರ್ಯವಾಗಿ ಕ್ರಮ ಕೈಗೊಳ್ಳಲೇಬೇಕಾಯಿತು. ನೌಕರರ ಹಿತಾಸಕ್ತಿಗಳನ್ನು ಎ. ಐ. ಬಿ. ಇ. ಎ. ನಾಯಕತ್ವ ಯಾವ ರೀತಿಯಲ್ಲಿ ಬ್ಯಾಂಕ್ ಆಡಳಿತವರ್ಗ ಮತ್ತು ಸರ್ಕಾರಕ್ಕೆ ಒತ್ತೆಇಟ್ಟಿತು ಎಂಬುದನ್ನು 1970 ಮತ್ತು 1979ರ ದ್ವಿಪಕ್ಷೀಯ ಒಪ್ಪಂದಗಳು ಸ್ಪಷ್ಟ ನಿದರ್ಶನವಾಗಿದ್ದವು.

ಹೋರಾಟಗಳನ್ನು ಮೊಟಕುಮಾಡಿದವರು

ಅನೇಕ ಸಂದರ್ಭಗಳಲ್ಲಿ ಎ. ಐ. ಬಿ. ಇ. ಎ. ನಾಯಕರು ವಿರೋಚಿತ ಹೋರಾಟಗಳಿಗೆ ತಡೆಹಾಕಿದರು. ಈ ಮಹಾನುಭಾವರು 1975ರಲ್ಲಿ ಕರಾಳ ತುರ್ತುಪರಿಸ್ಥಿತಿ ಜಾರಿಗೆ ಅಗಾಧ ಬೆಂಬಲ ನೀಡಿದ್ದರು. ಆಳುವ ವರ್ಗದೊಟ್ಟಿಗೆ ವರ್ಗಸಹಕಾರ ನೀತಿಗೆ ಇದು ನಿದರ್ಶನ. ಎ. ಐ. ಬಿ. ಇ. ಎ.ನ ಈ ಧೋರಣೆಗಳಿಂದ ಸ್ವಾಭಾವಿಕವಾಗಿ ದೇಶಾದ್ಯಂತ ಪರಿಣಾಮಕಾರಿಯಾಗಿ ಬ್ಯಾಂಕ್ ನೌಕರರ ಸಂಘಟನೆ ಕಟ್ಟುವದಾಗಲಿಲ್ಲ. ಪಶ್ಚಿಮ ಬಂಗಾಲದಲ್ಲಿ, ನಾಯಕತ್ವವನ್ನು ಪ್ರಶ್ನಿಸುವ ಭಿನ್ನಮತೀಯರನ್ನು ತುಳಿಯುವ ಯತ್ನ ಆರಂಭವಾಯಿತು. ಎ.ಐ.ಬಿ.ಇ.ಎ.ನ್ನ ರಾಜ್ಯಘಟಕವಾದ "ಬಂಗಾಲ ಪ್ರೊವಿನ್ಸಿಯಲ್ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಶನ್"ನ ಪ್ರಧಾನಕಾರ್ಯದರ್ಶಿಯು ಎಲ್ಲ ಸಂವಿಧಾನಾತ್ಮಕ ನಿಯಮಗಳನ್ನು ಉಲ್ಲಂಘಿಸಿ ಬಿ. ಪಿ. ಬಿ. ಇ. ಎ.ನ ಉಪಾಧ್ಯಕ್ಷ ಮತ್ತು ಇಬ್ಬರು ಸಹಕಾರ್ಯದರ್ಶಿಗಳು ಮತ್ತು ಖಜಾಂಜಿಯವರನ್ನು ಅವರವರ ಸ್ಥಾನಗಳಿಂದ ವಜಾಮಾಡಿದರು. 16 ಸ್ಥಳೀಯ ಘಟಕಗಳನ್ನು ಸದಸ್ಯತ್ವದಿಂದಲೇ ಉಚ್ಚಾಟಿಸಲಾಯಿತು.ಬಿ . ಪಿ. ಬಿ. ಇ. ಎ.ನ ಒಟ್ಟು 34,000 ಸದಸ್ಯರಲ್ಲಿ 20,000 ಸದಸ್ಯರನ್ನು ವಜಾಮಾಡಿದಂತಾಯಿತು.

ಸೆಪ್ಟೆಂಬರ್ ಸಮಾವೇಶ

ಈ ಅನ್ಯಾಯದ ಕ್ರಮಗಳಿಂದಾಗಿ ಅನಿವಾರ್ಯವಾಗಿ ಎ. ಐ. ಬಿ. ಇ. ಎ.ನಿಂದ ಹೊರಬಂದು ಹೊಸ ಸಂಘಟನೆಯನ್ನು ಆರಂಭಿಸುವ ಅವಶ್ಯಕತೆ ಉಂಟಾಯಿತು. ಸೆಪ್ಟೆಂಬರ್ 28, 1980ರಂದು ನಡೆದ ಸಮಾವೇಶದಲ್ಲಿ 25000 ನೌಕರರನ್ನು ಪ್ರತಿನಿಧಿಸುವ 793 ಪ್ರತಿನಿಧಿಗಳು, 380 ವೀಕ್ಷಕರು ಪಾಲ್ಗೊಂಡಿದ್ದರು.

ಸಮಾವೇಶದಲ್ಲಿ ಸರ್ವಾನುಮತದಿಂದ ಎ. ಐ. ಬಿ. ಇ. ಎ.ನಿಂದ ಹೊರಬರುವ ತೀರ್ಮಾನವಾಯಿತು. ರಾಜ್ಯಮಟ್ಟದ ಸಂಘಟನೆ ಆರಂಭಿಸುವ ಪ್ರಾರಂಭದ ಹೆಜ್ಜೆಯಾಗಿ "ಸಿದ್ಧತಾ-ಸಮಿತಿಯನ್ನು ಆಯ್ಕೆಮಾಡಲಾಯಿತು. ಕಳೆದ 15 ವರ್ಷಗಳಿಂದ ಅನುಸರಿಸುತ್ತಾಬಂದಿರುವ ಎ.ಐ.ಬಿ.ಇ ಬಿ.ಎ.ನ ಹೋರಾಟದಿಂದ ಹಿಂದೆ ಸರಿಯುವನೀತಿಗೆ ಅಸಂತೃಪ್ತಿ ವ್ಯಕ್ತಪಡಿಸಲಾಯಿತು. ಬ್ಯಾಂಕ್ ಆಡಳಿತವರ್ಗವು ಗಣಕಯಂತ್ರ ಮೊದಲಾದ ಯಾಂತ್ರೀಕರಣ ಪದ್ಧತಿಗಳನ್ನು ಜಾರಿಗೆ ತಂದಾಗ ಕಾರ್ಮಿಕ ವಿರೋಧಿ ಧೋರಣೆ ಅನುಸರಿಸಿದಾಗ ಎ. ಐ. ಬಿ. ಇ. ಎ. ನಾಯಕರು ಪ್ರತಿಭಟಿಸಲಿಲ್ಲ.

ಈ ಸಮಾವೇಶದ ತೀರ್ಮಾನದಂತೆ ಜನವರಿ 16ರಿಂದ 18ರ ವರೆಗೆ ಬ್ಯಾಂಕ್ ನೌಕರರ ಸಮ್ಮೇಳನ ಜರುಗಿತು. 16ರಂದು ಪ್ರಚಂಡ ರ್‍ಯಾಲಿ ಹೊರಡಿಸುವುದರೊಂದಿಗೆ ಸಮ್ಮೇಳನ ಆರಂಭವಾಯಿತು. ರಾಜಾ ಸುಭೋಧ ಮಲ್ಲಿಕ್ ವೃತ್ತದಲ್ಲಿ ಸಮಾವೇಶಗೊಂಡ ಸಭೆಯ ಅಧ್ಯಕ್ಷತೆಯನ್ನು ಬ್ಯಾಂಕ್ ನೌಕರರ ಚಳುವಳಿಯ ಖ್ಯಾತಧುರೀಣ ಪರಿಮಳದಾಸ್‌ರು ವಹಿಸಿದರು.

ಐಕ್ಯತೆ-ಯಾತಕ್ಕೋಸ್ಕರ ?

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮುಖ್ಯಮಂತ್ರಿ ಕಾಂ. ಜ್ಯೋತಿ ಬಸು ಅವರು ಮಾತನಾಡುತ್ತಾ ಯಾವುದೇ ಸಂಘಟನೆ ಹೆಸರಿಗೆ ಮಾತ್ರ ಇದ್ದರೆ ಅದರ ಅಸ್ತಿತ್ವಕ್ಕೇ ಬೆಲೆ ಇಲ್ಲ. ವರ್ಗಬೇಧವಿರುವ ಈ ಸಮಾಜದಲ್ಲಿ ಬೇಡಿಕೆಗಳನ್ನು ಪಡೆಯಬೇಕಾದಲ್ಲಿ ಹೋರಾಟವೊಂದೇ ದಾರಿ; ಹೋರಾಟವೊಂದೇ ಐಕ್ಯತೆಯನ್ನು ಮತ್ತು ನೈಜ ಸಂಘಟನೆಯನ್ನು ಉಳಿಸಬಲ್ಲದು" ಎಂದರು.

ಈ ಸಂದರ್ಭದಲ್ಲಿ ಕಾಂ. ಜ್ಯೋತಿ ಬಸು ಅವರು ಎ.ಐ.ಟಿ.ಯು.ಸಿ.ಯಲ್ಲಿ ಬಿರುಕು ಉಂಟಾದಂದರ ಹಿನ್ನೆಲೆಯನ್ನು ಸ್ಮರಿಸಿದರು. "ಅವಿಭಜಿತ ಎ.ಐ.ಟಿ.ಯು.ಸಿ.ಯಲ್ಲಿ ಐಕ್ಯತೆಗೆ ನಾವು ಪದೇ ಪದೇ ಒತ್ತಾಯಿಸಿದ್ದೆವು. ಸಂಘಟನೆಯ ಐಕ್ಯತೆ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲು ವಿಫಲವಾದಾಗ ಅನಿವಾರ್ಯವಾಗಿ ಬೇರೆ ಪರ್ಯಾಯವನ್ನು ಕಂಡುಕೊಳ್ಳಬೇಕಾಯಿತು. ಸಮರಶೀಲ ಸಿ.ಐ.ಟಿ.ಯು. ಸಂಘಟನೆಗೆ ನಾಂದಿಯಾಯಿತು" ಎಂದರು.

ಮುಂದುವರೆದು "ಬ್ಯಾಂಕುಗಳು ಕೇಂದ್ರ ಸರ್ಕಾರದ ಅಡಿಯಲ್ಲಿ ಇರುವುದಾದರೂ, ಎಡರಂಗ ಸರ್ಕಾರ ತನ್ನ ಕೈಲಾದಂದನ್ನ ಬ್ಯಾಂಕ್ ನೌಕರರ ಹಿತರಕ್ಷಣೆಗೆ ಶ್ರಮಿಸುವದು" ಎಂದು ಘೋಷಿಸಿದರು. ಇದೇ ಸಮಯದಲ್ಲಿ, ರಾಜ್ಯ ಸರ್ಕಾರವು ಯೋಜಿಸಿರುವ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಹಕರಿಸಬೇಕೆಂದು ಬ್ಯಾಂಕ್ ನೌಕರರನ್ನು ಕೇಳಿಕೊಂಡರು.

ಸಿ.ಐ.ಟಿ.ಯು.ವಿನ ಕಾರ್ಯದರ್ಶಿ ಎಂ. ಕೆ. ಪಂಥೆ ಮಾತನಾಡುತ್ತಾ, ಪಶ್ಚಿಮ ಬಂಗಾಳದ ಹೋರಾಟದ ಪರಂಪರೆ ಇರುವ ಕಾರ್ಮಿಕ ವರ್ಗ ದೇಶದ ವಿವಿಧ ಭಾಗಗಳಲ್ಲಿರುವ ಕಾರ್ಮಿಕರಿಗ ದಾರಿದೀಪವಾಗಿದೆ. ಈ ಪರಂಪರೆ ಉಳಿಸಿಕೊಳ್ಳಲು ಅನವರತ ಶ್ರಮಿಸಲು ಕರೆ ನೀಡಿದರು.

ಕೇಂದ್ರ ಸರ್ಕಾರದ ನೌಕರರ ಚಳುವಳಿಯ ಧುರೀಣ ದಿಪೇನ್ ಘೋಷ ಮತ್ತು ಸಿದ್ಧತಾ ಸಮಿತಿಯ ಸಂಚಾಲಕ ನರೇಶ ಪಾಲ್‌ರು ಹೊಸ ಸಂಘಟನೆಯ ಅನಿವಾರ್ಯದ ಬಗ್ಗೆ ಮಾತನಾಡಿದರು.

ಸುಮಾರು 10,000ಕ್ಕೂ ಮಿಕ್ಕಿ ಬ್ಯಾಂಕ್ ನೌಕರರು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದು, ಬೇರೆಬೇರೆ ಬ್ಯಾಂಕುಗಳ ನೌಕರರು ತಮ್ಮ ತಮ್ಮ ಬ್ಯಾನರ್‌ಗಳೊಂದಿಗೆ ಆಗಮಿಸಿದ್ದರು.

ಪ್ರತಿನಿಧಿಗಳ ಅಧಿವೇಶನ

17 ಮತ್ತು 18 ರಂದು ಬೇಕರ್ ಹಾಲ್ ನಡೆದ ಪ್ರತಿನಿಧಿಗಳ ಸಭೆಯಲ್ಲಿ 1025 ಪ್ರತಿನಿಧಿಗಳು ಭಾಗವಹಿಸಿದ್ದರು. ಬೇರೆ ಬೇರೆ 14 ರಾಜ್ಯಗಳಿಗೆ ಸೇರಿದ 164 ಬ್ಯಾಂಕ್ ನೌಕರರ ಧುರೀಣರು. ಸಭೆಯಲ್ಲಿ ಆಗಮಿಸಿದ್ದರು. ಬಿಹಾರ, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ಓರಿಸ್ಸಾ, ಮಹಾರಾಷ್ಟ್ರ, ತ್ರಿಪುರಾ, ದೆಹಲಿ ಮತ್ತು ಪಂಜಾಬಿನಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು.

ಸ್ವಾಗತ ಸಮಿತಿಯ ಛೇರಮನ್ ಕಾಮ್ರೇಡ್ ಸೋಮನಾಥ ಚಟರ್ಜಿ (ಎಂ.ಪಿ.) ಸ್ವಾಗತಿಸಿದರು. ಪಶ್ಚಿಮ ಬಂಗಾಳದ ಕಾರ್ಮಿಕ ಮಂತ್ರಿ ಕಾಂ. ಕೃಷ್ಣಪಾದ್‌ಘೋಷರು ಉದ್ಘಾಟನೆ ಮಾಡಿದರು. ಸೌಹಾರ್ದ ಪ್ರತಿನಿಧಿಗಳು ಸಮ್ಮೇಳನಕ್ಕೆ ಶುಭಾಶಯ ಕೋರಿದರು.

ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ, ಕೇಂದ್ರ ಸರ್ಕಾರದ ಜನವಿರೋಧಿ ಧೋರಣೆಗಳ ಬಗ್ಗೆ. ಬ್ಯಾಂಕ್ ಉದ್ದಿಮೆಯ ಸ್ಥಿತಿಗಳ ಬಗ್ಗೆ, ಎ. ಐ. ಬಿ. ಇ.ಎ.ನ ಆಡಳಿತ ವರ್ಗದ ಪರವಾದ ಧೋರಣೆಗಳ ಬಗ್ಗೆ ಹೊಸ ಸಂಘಟನೆಯನ್ನು ಆರಂಭಿಸುವ ಅವಶ್ಯಕತೆಯ ಬಗೆಗಿನ ಅಂಶಗಳನ್ನೊಳಗೊಂಡ ವರದಿಯನ್ನು ಸಂಚಾಲಕರಾದ ನರೇಶ್ ಪಾಲ್‌ರು ಮಂಡಿಸಿದರು.

50ರ ದಶಕದಲ್ಲೇ ಬ್ಯಾಂಕ ನೌಕರರು ಬ್ಯಾಂಕುಗಳನ್ನು ರಾಷ್ಟ್ರೀಕರಿಸುವ ಬೇಡಿಕೆಯನ್ನು ಮಂಡಿಸುತ್ತಾ ಬಂದಿದ್ದನ್ನು ಪ್ರಸ್ತಾಪಿಸುತ್ತಾ, 1969ರಲ್ಲಿ ಆಳುವ ಪಕ್ಷ 14 ಭಾರತೀಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿ ವಿದೇಶೀ ಬ್ಯಾಂಕುಗಳ ತಂಟೆಗೆ ಹೋಗಲೇ ಇಲ್ಲವೆಂಬುದನ್ನು ಜ್ಞಾಪಿಸಿದರು. 1980ರಲ್ಲಿ ಇನ್ನೂ 6 ಭಾರತೀಯ ಬ್ಯಾಂಕುಗಳು ರಾಷ್ಟ್ರೀಕರಣಗೊಂಡ ಸಂದರ್ಭದಲ್ಲೂ ವಿದೇಶಗಳ ಬ್ಯಾಂಕುಗಳ ಗೊಡವೆಗೇ ಹೋಗಲಿಲ್ಲವೆಂದರು. "ರಾಷ್ಟ್ರೀಕರಣದ ನಂತರವೂ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಮಾತ್ರ ಹೆಚ್ಚಿನ ಬ್ಯಾಂಕ್ ಸೌಲಭ್ಯ ನೀಡುವ ನೀತಿ ಮುಂದುವರೆದು ಸಾಮಾನ್ಯ ಜನತೆಗೆ ಸೌಲಭ್ಯ ತಲುಪಲೇ ಇಲ್ಲ" ಎಂದರು.

ವರದಿಯ ಮೇಲೆ ಸುಧೀರ್ಘ ಚರ್ಚೆ ನಡೆದು 36 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಚರ್ಚೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ, ವಿಶಾಲ ಪ್ರಜಾಪ್ರಭುತ್ವ ಚಳುವಳಿಯೊಂದಿಗೆ ಬ್ಯಾಂಕ್ ನೌಕರರ ಚಳುವಳಿಯನ್ನು ಜೊತೆಗೂಡಿಸುವ ಅವಶ್ಯಕತೆಯ ಬಗ್ಗೆ ಒತ್ತಿಒತ್ತಿ ಹೇಳಿದರು. ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಹೊಸದಾಗಿ ರೂಪಗೊಂಡ "ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್"ಗೆ ಅಧ್ಯಕ್ಷರಾಗಿ ಕಾಂ. ನರೇಶ್ ಪಾಲ್‌ರು, ಉಪಾಧ್ಯಕ್ಷರುಗಳಾಗಿ ಕೇಶವ್‌ಸೇನ್, ಅನಿಲ್‌ದತ್ತಾ ಮತ್ತು ಕಾಶೀನಾಥ ಚಟರ್ಜಿ, ಪ್ರಧಾನ ಕಾರ್ಯದರ್ಶಿಯಾಗಿ ನರೇಶ್‌ದಾಸ್, ಸಹಕಾರ್ಯದರ್ಶಿಗಳಾಗಿ ಶಾಂತಿಬಾಲ್, ಶಾಂತಿಬರ್ಧನ್, ಸುಭಿನೊಯ್‌ರಾಯ್ ಮತ್ತು ಖಜಾಂಚಿಯಾಗಿ ಅಮಲೇಂದು ಸೇನ್, ಸಹಖಜಾಂಜಿಯಾಗಿ ಪ್ರದೀಪ್ ಬಿಶ್ವಾಸ ಸರ್ವಾನುಮತದಿಂದ ಆಯ್ಕೆಯಾದರು. ಕಾರ್ಯಕಾರಿ ಸಮಿತಿ ಮತ್ತು ಜನರಲ್ ಕೌನ್ಸಿಲ್‌ಗಳ ಸದಸ್ಯರನ್ನೂ ಚುನಾಯಿಸಲಾಯಿತು.

ಅಖಿಲಭಾರತ ಲಕ್ಷಣಗಳು

ಈಗಾಗಲೇ ತ್ರಿಪುರಾ ಮತ್ತು ಬಿಹಾರ್‌ಗಳಲ್ಲಿ ಇದೇ ರೀತಿಯ ಸಮ್ಮೇಳನಗಳು ನಡೆದಿರುವುದನ್ನು ಗಮನಿಸಬೇಕಾಗಿದೆ. ಈ ರಾಜ್ಯಗಳಲ್ಲೂ ಎ. ಐ. ಬಿ. ಇ. ಎ. ನಾಯಕತ್ವವನ್ನು ಬಿಟ್ಟು ಹೊಸ ರಾಜ್ಯಮಟ್ಟದ ಸಂಘಟನೆಗಳು ರೂಪಗೊಂಡಿವೆ. ಓರಿಸ್ಸಾನಲ್ಲೂ ಇದೇ ಪ್ರಯತ್ನಗಳು ಭರದಿಂದ ನಡೆದಿವೆ.

ಈ ಸಮ್ಮೇಳನದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಹೊಸ ಸಂಘಟನೆಗೆ ನಿರ್ಧಿಷ್ಟ ಯೋಜನೆ ರೂಪುಗೊಂಡಿಲ್ಲವಾದರೂ, ಬೇರೆಬೇರೆ ರಾಜ್ಯಗಳಿಂದ ಆಗಮಿಸಿದ ಪ್ರತಿನಿಧಿಗಳ ಮನೋಭಾವವೂ ಇದೇ ತೆರನದಾಗಿತ್ತು. ಎ. ಐ. ಬಿ. ಇ. ಎ. ನಾಯಕತ್ವದ ಬಗ್ಗೆ ಪ್ರತಿಕ್ರಿಯೆ ಒಂದೇ ರೀತಿಯದಾಗಿತ್ತು. ಎ. ಐ. ಬಿ. ಇ. ಎ.ನಿಂದ ಹೊರಬಂದು ಅಖಿಲಭಾರತ ಮಟ್ಟದಲ್ಲೂ ತಕ್ಷಣ ಸಮರಶೀಲ ಸಂಘಟನೆಯನ್ನು ಹುಟ್ಟುಹಾಕಲೇಬೇಕೆಂಬ ಮನೋಭಾವ ಕಂಡುಬಂದಿತು.

○

ಪಂಜಾಬ್ : ಯಶಸ್ವೀ ವಿಧಾನ-ಸಭಾ ಘೆರಾವೋ

ಅನೇಕ ಕುತಂತ್ರಗಳನ್ನು ಹೂಡಿ, ಕ್ರೂರ ದಬ್ಬಾಳಿಕೆಯಿಂದ ಹತ್ತಿಕ್ಕಲು ಯತ್ನಿಸಿದರೂ, ಪಂಜಾಬ್‌ನ ಐದು ಪಕ್ಷಗಳ ನೇತೃತ್ವದ ಯೋಜಿತ "ವಿಧಾನಸಭಾ ಘೆರಾವೋ" ಕಾರ್ಯಕ್ರಮ ಅಭೂತಪೂರ್ವವಾಗಿ ನಡೆಯಿತು. ಜನವರಿ 21ರಂದು ನಡೆದ ಈ ಕಾರ್ಯಕ್ರಮದಲ್ಲಿ 5 ಪಕ್ಷಗಳ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಸ್ವಯಂಸೇವಕರು ಪೋಲೀಸರ ಲಾಠಿ ಏಟನ್ನು, ಅಶ್ರುವಾಯುವನ್ನು ಎದುರಿಸಿ ವಿಧಾನಸಭೆಗೆ ನುಗ್ಗಿದರು. ಅನೇಕರು ಲಾಠಿ ಏಟಿನಿಂದ ಗಾಯಗೊಂಡರು.

ಪ್ರಪ್ರಥಮ ಬಾರಿ ಬಜೆಟ್ ಅಧಿವೇಶನದ ಪ್ರಾರಂಭ ದಿನದಂದು ನಡೆಯುವ ರಾಜ್ಯಪಾಲರ ಭಾಷಣ ನಿಂತು ಹೋಯಿತು. ಪೂರ್ತಿ ಕಟ್ಟಡ ಸ್ವಯಂಸೇವರ ದಿಗ್ಬಂಧನದಲ್ಲಿದ್ದ ಕಾರಣ ರಾಜ್ಯಪಾಲರಿಗೆ ವಿಧಾನಸಭೆಯನ್ನು ಪ್ರವೇಶಿಸುವುದೇ ಆಗಲಿಲ್ಲ.

ಜನವರಿ 21ರಂದು ಚಂಡೀಗಡದಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿ-ಯುವಜನರು ಮತ್ತು ಮಹಿಳೆಯರು ಉತ್ಸಾಹಪೂರ್ಣರಾಗಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ರಾಜ್ಯಸರಕಾರ ಈ ಕಾರ್ಯಕ್ರಮ ತಡೆಯಲು ಅಸಂಖ್ಯಾತ ಪೋಲೀಸರನ್ನು ನಿಯೋಜಿಸಿತ್ತು. ನಗರ ಪ್ರವೇಶದ ದ್ವಾರಗಳಲ್ಲಿ ಪೋಲೀಸರು ಠಾಣೆ ಹೂಡಿದ್ದರು.

ಕಾರ್ಯಕ್ರಮ ಹತ್ತಿಕ್ಕುವ ಅಂಗವಾಗಿ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದ ಧುರೀಣರನ್ನು ಕೆಲವು ದಿನ ಮುಂಚೆಯೇ ಬಂಧಿಸಲಾಗಿತ್ತು. ವಿವಿಧ ವಿರೋಧ ಪಕ್ಷಗಳಿಗೆ ಸೇರಿದ ಸುಮಾರು 1000ಕ್ಕೂ ಹೆಚ್ಚು ಸಕ್ರೀಯ ಕಾರ್ಯಕರ್ತರನ್ನು ಮುಂಚೆಯೇ ಬಂಧಿಸಲಾಗಿತ್ತು.

ಘೆರಾವೋ ಕಾರ್ಯಕ್ರಮದ ಮೊದಲು ನೆರೆದಿದ್ದ ಪ್ರಚಂಡ ಜನಸಮೂಹವನ್ನು ಉದ್ದೇಶಿಸಿ ಕಾಂ. ಗುರುಚರಣ ಸಿಂಗ ರಾಂಧ್ವಾ [ಸಿ.ಪಿ.ಐ.(ಎಂ)], ಅವತಾರ್ ಸಿಂಗ್ ಮಲ್ಹೋತ್ರಾ (ಸಿ.ಪಿ.ಐ.), ಪಿ.ಎಸ್. ಬಾದಲ್ (ಅಕಾಲಿ ದಳ), ಅಂಬಿಕಾ ಸೋನಿ [ಕಾಂಗ್ರೆಸ್ (ಯು)] ಮತ್ತು ಜನತಾಪಕ್ಷದ ಹರಭಜನ್‌ಸಿಂಗ್ ಇವರುಗಳು ಮಾತನಾಡಿದರು.

ದರ್ಬಾರ್‌ಸಿಂಗ್ (ಮುಖ್ಯಮಂತ್ರಿ)ರ ಪೋಲೀಸ್ ಪಡೆ ಪ್ರದರ್ಶನಕಾರರನ್ನು ತಡೆಯಲು ವಿಶ್ವಪ್ರಯತ್ನ ಮಾಡಿದರೂ ಏಟುಗಳನ್ನು ತಿನ್ನುತ್ತಲೇ ಜನತೆ ಮುಂದುವರೆಯಿತು. ವಿಧಾನಸಭಾ ಕಟ್ಟಡವನ್ನು ಎಲ್ಲ ಭಾಗಗಳನ್ನು ಮುತ್ತಿಗೆ ಹಾಕಲಾಯಿತು. ಪ್ರದರ್ಶನಕಾರರನ್ನು ತಡೆಯಲು ಪೋಲೀಸರು 500ಕ್ಕೂ ಹೆಚ್ಚು ಅಶ್ರುವಾಯು ಶೆಲ್‌ಗಳನ್ನು ಉಪಯೋಗಿಸಿದರು.

ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಕೊಡಬೇಕೆನ್ನುವ, ಹೆಚ್ಚಿಸಲಾದ ಬಸ್‌ದರ ವಿರೋಧಿಸಿ, ನಿಯಂತ್ರಣ ಬೆಲೆಗೆ ಜೀವನಾವಶ್ಯಕ ವಸ್ತುಗಳ ಸರಬರಾಜು ಮತ್ತು ಜನವಿರೋಧಿ ಕ್ರಮಗಳಾದ ಎನ್.ಎಸ್.ಎ. ಇತ್ಯಾದಿಗಳನ್ನು ಕೈಬಿಡಬೇಕು……ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ವಿರೋಧಿ ಪಕ್ಷಗಳು ಈ ಕಾರ್ಯಕ್ರಮ ಯೋಜಿಸಿದ್ದವು.

●

ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಮುಷ್ಕರ

ದೀರ್ಘ ಕಾಲದಿಂದ ಈಡೇರದೆ ಉಳಿದಿರುವ "ನಮ್ಮ ನೌಕರಿ ಖಾಯಂಗೊಳಿಸಿ" ಎಂಬ ಮುಖ್ಯ ಬೇಡಿಕೆಯನ್ನೊಳಗೊಂಡಂತೆ ಇತರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ರಾಯಚೂರು ಜಿಲ್ಲೆಯ ಪಿ.ಡಬ್ಲ್ಯು.ಡಿ. ದಿನಗೂಲಿಗಳು 28-1-81 ರಂದು ಮುಷ್ಕರ ಹೂಡಲು ಫೆಡರೇಷನ್ ಕರೆ ಕೊಟ್ಟಿತ್ತು.

28-1-81ರಂದು ಬೆಳಿಗ್ಗೆ ಜಿಲ್ಲೆಯ ತಾಲ್ಲೂಕುಗಳಾದ ದೇವದುರ್ಗ, ಮಾನ್ವಿ, ಲಿಂಗಸೂಗೂರು ಮತ್ತು ಇನ್ನಿತರ ಭಾಗಗಳಿಂದ ಬಂದ ಪಿ.ಡಬ್ಲ್ಯು.ಡಿ. ದಿನಗೂಲಿಗಳು ಬೆಳಿಗ್ಗೆ 9 ಗಂಟೆಗೆಲ್ಲ ಜಿಲ್ಲಾ ಸಮಿತಿಯ ಕಛೇರಿಯಲ್ಲಿ ಸೇರಿದರು. ಅಲ್ಲಿಂದ ಮೆರವಣಿಗೆಯ ಮೂಲಕ ಹೊರಟ ಈ ಇಲಾಖೆಯ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ 200ಕ್ಕೂ ಹೆಚ್ಚು ದಿನಗೂಲಿಗಳು, ಘೋಷಣೆಗಳನ್ನು ಕೂಗುತ್ತ ಜಿಲ್ಲಾಧಿಕಾರಿ ಕಛೇರಿಗೆ ಮಧ್ಯಾಹ್ನ 2 ಗಂಟೆಗೆ ಬಂದು ತಲುಪಿದರು. ಜಿಲ್ಲಾಧಿಕಾರಿಗಳು ಬೆಂಗಳೂರಿಗೆ ಹೋಗಿದ್ದರಿಂದ ಹೆಡ್ ಕ್ವಾರ್ಟರ್ ಅಸಿಸ್ಟೆಂಟರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಮನವಿ ಪತ್ರಕ್ಕೆ ಉತ್ತರಿಸುತ್ತ ಎಚ್.ಎ.ರು ನಿಮ್ಮ ಬೇಡಿಕೆಗಳ ತೀರ್ಮಾನ ಸರ್ಕಾರ ಮಟ್ಟದಲ್ಲಿ ಆಗಿರಬೇಕಾಗಿರುವುದರಿಂದ ಸೂಕ್ತ ಶಿಫಾರಸ್ಸಿನೊಂದಿಗೆ ಸಂಬಂಧಪಟ್ಟವರಿಗೆ ಕಳುಹಿಸಿಕೊಡಲಾಗುವುದೆಂದು ಆಶ್ವಾಸನೆಯಿತ್ತರು. ಅಲ್ಲಿಂದ ರಾಯಚೂರು ವಿಭಾಗದ ಎಕ್ಸಿಕ್ಯೂಟಿವ್ ಇಂಜಿನೀಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರರಿಗೂ ಮನವಿ ಪತ್ರಗಳನ್ನು ಸಲ್ಲಿಸಿ, ತಮಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿದರು. ಅದಕ್ಕೆ ಉತ್ತರವಾಗಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರರು ತಿಂಗಳಿಗೆ ಈಗ ಹಾಕಲಾಗುತ್ತಿರುವ 4 ದಿನಗಳ ಗೈರು ಹಾಜರಿಯ ಬದಲು ಒಂದು ದಿನದ ಗೈರು ಹಾಜರಿಯನ್ನು, ಮತ್ತು ರಜಾದಿನಗಳಲ್ಲಿಯ ಸಂಬಳ ಕೊಡಲು, ಮತ್ತು ವಾಹನಗಳು ರೀಪೇರಿಯಲ್ಲಿರುವಾಗ ಕ್ಲೀನರ್ಸ್‌ಗಳಿಗೆ ಸಂಬಳ ಕೊಡುವುದು. ಇತರ ಕೆಲವು ಬೇಡಿಕೆಗಳು ಈಡೇರಿಸಲು ಒಪ್ಪಿಕೊಂಡರು.

ನಂತರ ಸಭೆ ಸೇರಿದ ಪಿ.ಡಬ್ಲ್ಯು.ಡಿ ದಿನಗೂಲಿಗಳನ್ನು ಉದ್ದೇಶಿಸಿ ಫೆಡರೇಷನ್‌ನ ರಾಯಚೂರು ಜಿಲ್ಲಾಧ್ಯಕ್ಷರಾದ ಎಚ್. ಗೋವಿಂದರೆಡ್ಡಿಯವರು ಮಾತನಾಡಿ "ಬರೀ ಮನವಿ ಪತ್ರಗಳನ್ನು ಸಲ್ಲಿಸುವುದರಿಂದಲೆ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲವೆಂಬುದು ನಮ್ಮ ಅನುಭವವಾಗಿದೆ. ಹಿಂದೆ ಹಲವಾರು ಸಲ ಈ ವಿಭಾಗಕ್ಕೆ ಭೇಟಿಕೊಟ್ಟ ಮಂತ್ರಿಗಳು ಮತ್ತು ಇತರ ಸಂಬಂಧ ಪಟ್ಟವರಿಗೆ ಮನವಿ ಪತ್ರ ಸಲ್ಲಿಸಿದಾಗ್ಯೂ ನಿಷ್ಪ್ರಯೋಜನವಾಗಿದೆ. ಆದ್ದರಿಂದ ನಾವು ಒಗ್ಗಟ್ಟಾಗಿ ಹೋರಾಟ ಮಾಡುವುದೊಂದೆ ನಮಗುಳಿದ ಮಾರ್ಗವಾಗಿದೆ. ಅದಕ್ಕೆ ಫೆಡರೇಷನ್ನನ್ನು ಬಲಪಡಿಸಿ, ಹೋರಾಟಕ್ಕೆ ಸಿದ್ಧರಾಗಲು" ಕರೆಯಿತ್ತರು. ನಂತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಪುರುಷೋತ್ತಮ ಮತ್ತು ಉಪಾಧ್ಯಕ್ಷರಾದ ಪ್ರಹ್ಲಾದಾಚಾರ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಮಿಕರು ಒಗ್ಗಟ್ಟಾಗಿ ಹೋರಾಡಲು ಕರೆಯಿತ್ತರು.

ಮುಂದೆ ಫೆಡರೇಷನ್ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮತ್ತು ಸಂಘಟನೆಯನ್ನು ಬಲಗೊಳಿಸಲು ಪ್ರತಿ ತಾಲ್ಲೂಕುಗಳಿಗೆ ಸಂಘಟಕರನ್ನು ಚುನಾಯಿಸಲಾಯಿತು.

○

ಸಿ.ಪಿ.ಐ.(ಎಂ) ಕಾರ್ಯಕರ್ತರ ಕೊಲೆ

ಕಾಂಗ್ರೆಸ್ ಗೂಂಡಾಗಳು ಮತ್ತು ನಕ್ಸಲವಾದಿಗಳು ಜೊತೆಗೂಡಿ ಇಬ್ಬರು ಮಾರ್ಕ್ಸ್‌ವಾದಿ ಕಾರ್ಯಕರ್ತರ ಕೊಲೆಮಾಡಿರುವ ವರದಿ ಆಂಧ್ರಪ್ರದೇಶದಿಂದ ಬಂದಿದೆ.

ನರಸಂಪೇಟೆ ತಾಲ್ಲೂಕಿನ ಅಶೋಕನಗರದಲ್ಲಿ ಜನವರಿ 25 ರಂದು ಸುಮಾರು 200 ಶಸ್ತ್ರಸಜ್ಜಿತ ಕಾಂಗ್ರೆಸ್ ಮತ್ತು ನಕ್ಸಲೀಯರ ಸಂಯುಕ್ತ ಪಡೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ಮೇಲೆ ದಾಳಿ ಮಾಡಿದಾಗ ಈ ಘಟನೆ ನಡೆದಿದೆ. ಕಾಂ. ವಿ. ಕೋಟಯ್ಯ ಮತ್ತು ಕಾಂ. ಎಂ. ಚಿನ್ನವೀರಸ್ವಾಮಿ ಇವರೇ ಕೊಲೆಗೀಡಾದ ಸಂಗಾತಿಗಳು. ಇವರಲ್ಲದೇ ಇನ್ನೂ 20 ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.

ನರಸಂಪೇಟೆ ತಾಲ್ಲೂಕಿನಲ್ಲೇ ಡಿಸೆಂಬರ್ 18ರಂದು ಮತ್ತು ಜನವರಿ 8ರಂದು ಒಟ್ಟು ಮೂವರು ಸಂಗಾತಿಗಳನ್ನು ಕೊಲೆಮಾಡಿರುವುದಲ್ಲದೇ 14 ಜನ ಸ್ತ್ರೀಯರ ಮಾನಭಂಗಮಾಡಲಾಗಿದೆ.

ಈ ಅಮಾನುಷ ಕೃತ್ಯಗಳಿಗೆ ಕಾರಣರಾದ ಗೂಂಡಾಗಳನ್ನು ಬಂಧಿಸದೇ ಮೂಕಪ್ರೇಕ್ಷಕವಾಗಿರುವ ಸರ್ಕಾರಕ್ಕೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಎಂ. ಹಣಮಂತರಾವ್ ತೀವ್ರ ಎಚ್ಚರಿಕೆ ನೀಡಿದ್ದು, ಜನತೆ ಈ ಅಮಾನುಷ ಘಟನೆಗಳನ್ನು ತೀವ್ರವಾಗಿ ಖಂಡಿಸಬೇಕೆಂದು ಕರೆಕೊಟ್ಟಿದ್ದಾರೆ.

○

ಏನಿದು ಈ "ಸಹಕಾರ"ದ ಕರೆ?

(5ನೇ ಪುಟದಿಂದ)

'ಸಹಕಾರ' ನೀಡಬೇಕೇ? ಬಹುರಾಷ್ಟ್ರೀಯ ಸಂಸ್ಥೆಗಳನ್ನು, ಏಕಸ್ವಾಮ್ಯವಾದಿಗಳನ್ನು ಸಂತುಷ್ಟಗೊಳಿಸುವಲ್ಲಿ ಅಥವಾ ಕಪ್ಪುಹಣ ಹಾಗೂ 'ಸಮಾಂತರ ಅರ್ಥವ್ಯವಸ್ಥೆ'ಗೆ ವಿಶೇಷ ಬೇರರ್ ಬಾಂಡುಗಳ ಮೂಲಕ ಬಹುಮಾನ ಕೊಡುವುದಕ್ಕೆ ನಾವು 'ಸಹಕಾರ' ಕೊಡಬೇಕೇ?"

"ವಿರೋಧ ಪಕ್ಷಗಳ ಸಹಕಾರ"ದ ಹೆಸರಿನಲ್ಲಿ ಪ್ರಧಾನ ಮಂತ್ರಿಯವರು ಬಯಸುವುದು ವಿರೋಧ ಪಕ್ಷಗಳು ತಮ್ಮ ಎಲ್ಲಾ ಧೀರ ಚಳವಳಿಯ ಚಟುವಟಿಕೆಗಳನ್ನು ಬಿಟ್ಟು ಕೊಡಬೇಕೆಂಬುದನ್ನು ಪ್ರಧಾನ ಮಂತ್ರಿಯವರು ಅಹಮದಾಬಾದಿನಲ್ಲಿ ಜನವರಿ 21 ರಂದು ಮಾಡಿದ ಭಾಷಣದಲ್ಲಿ ಜನತಾ ಆಡಳಿತ ಕಾಲದಲ್ಲಿ ಆಕೆ ಹಾಗೂ ಆಕೆಯ ಪಕ್ಷವೂ "ಒಂದು ರೈತ ಚಳುವಳಿಯನ್ನು ಆರಂಭಿಸಬಹುದಿತ್ತು. ಆಗ ಕಬ್ಬಿಣ ಬೆಲೆ ತೀವ್ರವಾಗಿ ಕುಸಿದಿತ್ತು. ಹಾಗೂ ಉತ್ತರ ಪ್ರದೇಶದ ರೈತರು ತಮ್ಮ ಕಬ್ಬಿನ ಬೆಳೆಯನ್ನು ನಾಶಪಡಿಸುತ್ತಿದ್ದರು ಅಥವಾ ಕೊಳೆಸುತ್ತಿದ್ದರು. ನಾವದನ್ನು ಮಾಡಲಿಲ್ಲ. ಯಾಕೆಂದರೆ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರದ ಹಾದಿಯಲ್ಲಿ ಆತಂಕಗಳನ್ನೊಡ್ಡುವಲ್ಲಿ ನಮಗೆ ನಂಬಿಕೆಯಿಲ್ಲ"ಎಂದಿದ್ದಾರಂತೆ.

ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಕೇರಳದಲ್ಲಿ ಪ್ರಧಾನ ಮಂತ್ರಿಯ ಪಕ್ಷ ಚಳವಳಿ ಸಂಘಟಿಸುತ್ತಿರುವ ಸಮಯದಲ್ಲೇ ಆಕೆಯ ಬಾಯಿಯಿಂದ ಇಂತಹ ಮಾತುಗಳು ಬರುತ್ತಿರುವುದು ಆಶ್ಚರ್ಯದ ಸಂಗತಿ ಯಾಕೆಂದರೆ ಈ ಚಳುವಳಿಗಳು ಅಲ್ಲಿನ ರಾಜ್ಯ ಸರ್ಕಾರಗಳನ್ನು ಉರುಳಿಸಬೇಕೆಂದೇ ಹೊರತು ಜನರ ಯಾವುದೇ ಒಂದು ಸಂಕಷ್ಟದ ನಿವಾರಣೆಗಾಗಿ ಅಲ್ಲ, ದೇಶದ ಇತರೆಡೆ ವಿರೋಧ ಪಕ್ಷಗಳಿಗೆ ಪ್ರಧಾನ ಮಂತ್ರಿಯವರು ಉಪದೇಶಿಸುತ್ತಿರುವ ಯಾವುದನ್ನೂ ಈ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಪಾಲಿಸುತ್ತಿಲ್ಲ. ತ್ರಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಚಳವಳಿ; ಪಶ್ಚಿಮ ಬಂಗಾಳದ ಎಡರಂಗದ ಸರ್ಕಾರವನ್ನು ಬಂಗಾಳಕೊಲ್ಲಿಗೆಸೆಯಲು ಚಳವಳಿ; ಕೇರಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದೀ ಸರ್ಕಾರವನ್ನು ಉರುಳಿಸಲು ಬಿ.ಜೆ.ಪಿ. ಹಾಗೂ ಜನತಾ ಪಕ್ಷದೊಂದಿಗೆ ಪ್ರತ್ಯಕ್ಷ ಗೆಳೆತನ ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳಿಂದ ಸಹಕಾರದ ಪ್ರಧಾನ ಮಂತ್ರಿಯ ಕೇಳಿಕೆಯನ್ನು ಗಮನಿಸಬೇಕು.

○

ಐ.ಟಿ.ಸಿ.(ಕೆ.ಇ.ಬಿ.) ವಿದ್ಯಾರ್ಥಿಗಳ ಮುಷ್ಕರ

ಮಂಗಳೂರಿನ ಕೆ.ಇ.ಬಿ. ಆಶ್ರಯದಲ್ಲಿ ತರಬೇತು ಹೊಂದುತ್ತಿರುವ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಈಡೇರಿಕೆಗೆ ಅಧಿಕಾರವರ್ಗವನ್ನು ಒತ್ತಾಯಿಸುತ್ತಾ ಬಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಾರಣ ಅನಿವಾರ್ಯವಾಗಿ 3-2-81 ರಿಂದ ದ. ಕ. ಜಿಲ್ಲಾಧಿಕಾರಿ ಕಛೇರಿ ಮುಂದೆ 24 ಘಂಟೆಗಳ ಅನಿರ್ದಿಷ್ಟಾವಧಿ ಸರದಿ ಅನ್ನ ಸತ್ಯಾಗ್ರಹ ಕೈಗೊಳ್ಳಲಾಗಿದೆ.

3-1-81ರಂದು ಬೆಳಿಗ್ಗೆ ಎಸ್.ಎಫ್.ಐ.ನ ಜಿಲ್ಲಾ ಸಮಿತಿ ಅಧ್ಯಕ್ಷ ಪಿ. ರಾಮಾನುಜನ್ ಸತ್ಯಾಗ್ರಹ ಉದ್ಘಾಟಿಸಿದರು. ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಎಸ್.ಎಫ್.ಐ.ನ ದ.ಕ. ಜಿಲ್ಲಾ ಕಾರ್ಯದರ್ಶಿ ಉಮೇಶ್ ಭಂಡಾರಿ ಅವರು ಮಾತನಾಡುತ್ತಾ ಬೆಂಬಲ ವ್ಯಕ್ತಪಡಿಸಿದರು. ಪ್ರಥಮ ದಿನದ ಅನ್ನಸತ್ಯಾಗ್ರಹದಲ್ಲಿ 14 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದು, ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಬೆಂಬಲಿಸಬೇಕೆಂದು ವಿದ್ಯಾರ್ಥಿಗಳ ಪರವಾಗಿ ವಾಸುದೇವಪ್ಪ ವಿನಂತಿಸಿಕೊಂಡಿದ್ದಾರೆ.

○

ಸಾಧಿಸಿದ್ದೇನು?

ವಿ.ಜಿ.ಕೆ. ನಾಯರ್

ಇತ್ತೀಚೆಗೆ ಕರ್ನಾಟಕದಲ್ಲಿ ರೈತರ ಜಾಥಾ ನಡೆದಿರುವ ಸಂದರ್ಭದಲ್ಲಿ ಕೇಳಿ ಬರುತ್ತಿರುವ ಪ್ರಶ್ನೆ ಸಾಧಿಸಿದ್ದೇನು? ಎಂಬುದು. ತಮ್ಮ ಕೆಲಸ-ಕಾರ್ಯಗಳನ್ನು ಬಿಟ್ಟು, ನೂರಾರು ಮೈಲು ದೂರ ನಡೆದು, ಸುಸ್ತಾಗಿರುವ ನರಗುಂದದ ರೈತರು ನನ್ನನ್ನು ಈ ಪ್ರಶ್ನೆ ಕೇಳಿದರು. "ನಿಮ್ಮ ಹೋರಾಟ ನರಗುಂದ, ನವಲಗುಂದ, ಸೌಂದತ್ತಿ ತಾಲ್ಲೂಕುಗಳಿಗೆ ಮಾತ್ರ ಸೀಮಿತವಾಗಿತ್ತು. ಈ ಜಾಥಾದಿಂದಾಗಿ ಅದನ್ನು ಇಡೀ ರಾಜ್ಯಕ್ಕೇ ವಿಸ್ತರಿಸಿದಂತಾಗಿದೆ; ಇದೇ ನಮ್ಮ ಗೆಲವು" ಎಂದು ನಾನು ಅವರಿಗೆ ಹೇಳಿದೆ.

ಬಂಧಿತರಾದ ನರಗುಂದ ಹೋರಾಟಗಾರರನ್ನೆಲ್ಲರನ್ನೂ ಬಿಡುಗಡೆ ಮಾಡಿಲ್ಲವೆಂಬುದು ಸರಿ. ಜಾಥಾ ಶುರುವಾದ ಕೂಡಲೇ 69 ಬಂಧಿತರ ಮೇಲಿದ್ದ ಕೇಸು ಹಿಂತೆಗೆದು ಸರ್ಕಾರ ಅವರನ್ನು ಬಿಡಬೇಕಾಗಿ ಬಂದಿತು. ಜಾಥಾ ಧಾರವಾಡ ಜಿಲ್ಲೆ ದಾಟುವ ಹೊತ್ತಿಗೆ, ಉಳಿದ 20 ಬಂಧಿತರನ್ನು ಜಾಮೀನು ಮೇಲೆ ಬಿಡಲಾಯಿತು. ಈ 20 ಜನರ ಮೇಲಿರುವ ಕೇಸುಗಳನ್ನು ಹಿಂತೆಗೆದುಕೊಳ್ಳಲಿಕ್ಕೆ ಗುಂಡೂರಾಯರು ಮಂತ್ರಿಮಂಡಳದ ಅನುಮತಿ ಕೇಳಿದ್ದಾರೆಂದು ವರದಿಯಾಗಿದೆ. ಈ 20 ಜನರ ಬಿಡುಗಡೆಗಾಗಿ ಇಡೀ ರಾಜ್ಯದಾದ್ಯಂತ ಹೋರಾಟ ನಡೆಸಲು ಸಾಧ್ಯಮಾಡಿದುದು ಈ ಜಾಥಾ ಎಂಬುದನ್ನು ಮರೆಯಕೂಡದು.

ನಾವು ಮೆರವಣಿಗೆಯಲ್ಲಿ ಬರುತ್ತಿರುವಾಗ "ಬಂಧಿತರನ್ನು ಬಿಡುಗಡೆ ಮಾಡಿ; ಇಲ್ಲದಿದ್ದರೆ ನಮ್ಮನ್ನು ಬಂಧಿಸಿ" ಎಂದು ಕೇಳುತ್ತಿದ್ದರಲ್ಲಾ? ಎಂದು ಕೆಲವರ ಪ್ರಶ್ನೆ. ಬಂಧಿತರನ್ನು ಬಿಡುಗಡೆ ಮಾಡಿದ್ದರೂ ಮೊಕದ್ದಮೆಗಳನ್ನು ವಾಪಸ್ಸು ಪಡೆದಿಲ್ಲ. ಈ ಮೊಕದ್ದಮೆಗೆ ಒಳಗಾದವರನ್ನು ಪೂರ್ಣ ಸ್ವತಂತ್ರರನ್ನಾಗಿ ಮಾಡದಿದ್ದರೆ, ಇಡೀ ರಾಜ್ಯಾದ್ಯಂತ ಚಳುವಳಿ ಪ್ರಾರಂಭಿಸಿ ಹೆಚ್ಚು ಜನ ಬಂಧಿತರಾಗುವ ಸಾಧ್ಯತೆ ಈಗ ಉಂಟಾಗಿದ್ದಂತೂ ಖಂಡಿತ.

ರಾಜಕೀಯ :

ರಾಜಕೀಯ ಪಕ್ಷಗಳು ರೈತರ ಚಳುವಳಿಗಳನ್ನು ಉಪಯೋಗಿಸಿವೆ ಎಂಬ ಪ್ರಚಾರವೂ, ಆಳುವವರ್ಗದ ಹಿತದೃಷ್ಟಿಯಿಂದಲೇ ಎಂಬುದು ಜನಕ್ಕೆ ಗೊತ್ತಾಗಿದೆ. "ರಾಜಕೀಯ ಬೇಡ" ಎಂಬುದೇ ರಾಜಕೀಯ. "ಇವತ್ತಿನ ಆಡಳಿತವೇ ಸಾಕು; ಬದಲಾವಣೆ ಬೇಡ ಎಂಬುದೇ ಇದರರ್ಥ. ಇದು ಆಳುವ ವರ್ಗಗಳ ಹಿತರಕ್ಷಿಸಲು ನಡೆಸುತ್ತಿರುವ ಪ್ರಚಾರ ಎಂಬುದು ಗೊತ್ತಾಗಲು ಕಷ್ಟಪಡಬೇಕಿಲ್ಲ.

ಮೂವತ್ತು ಮೂರು ವರ್ಷಗಳು

ಕಳೆದ ಮೂವತ್ತು ಮೂರು ವರ್ಷ ವರ್ಷಗಳ ದುರಾಡಳಿತದ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ. ಆಕಾಲದಲ್ಲಿ ಆಡಳಿತದಲ್ಲಿರುವವರೂ, ಈ ರೀತಿ ಮಾತನಾಡುವವರಲ್ಲಿ ಸೇರಿರುವರು. ಕಳೆದ ಮೂವತ್ತು ಮೂರು ವರ್ಷಗಳ ಆಡಳಿತ ಟೀಕಿಸುವವರಲ್ಲಿ ಹಿಂದೆ ಆಡಳಿತದಲ್ಲಿದ್ದ ಕೆಲವರು ಸ್ವಯಂ ಟೀಕೆ ಮಾಡಿಕೊಳ್ಳುತ್ತಿರುವದು ಗಮನಾರ್ಹ. ದುರಾಡಳಿತಕ್ಕೆ ಇವರೇ ಕಾರಣರು ಎಂಬುದೂ ಸರಿಯಲ್ಲ. ಸ್ವಾತಂತ್ರ್ಯ ನಂತರ ನಮ್ಮ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಮುನ್ನಡೆಸಿರುವದೇ ಕಾರಣ. ಬಂಡವಾಳಶಾಹಿಗಳ ಪರವಾದ ಕೇಂದ್ರ ಸರಕಾರದ ಧೋರಣೆಗೆ ವಿರೋಧವಾಗಿ ಇತ್ತೀಚಿನವರೆಗೂ ಆಡಳಿತದಲ್ಲಿದ್ದ ಕೆಲವರು ನಿಂತಾಗ ನಾವು ಅವರನ್ನು ಸ್ವಾಗತಿಸಬೇಕಾಗಿದೆ. ಇಂದಿರಾಗಾಂಧಿಯವರ ಸರ್ವಾಧಿಕಾರೀ ಪ್ರವೃತ್ತಿಯನ್ನು ಪ್ರತಿಭಟಿಸಿ ಇವರಲ್ಲಿ ಕೆಲವರು ಎಡಶಕ್ತಿಗಳ ಜೊತೆ ಸೇರಿ, ದೇಶದ ಆಳುವ ಧೋರಣೆಯ ಬದಲಿಸಬೇಕೆಂಬ ಕೂಗು ಎಬ್ಬಿಸಿರುವುದನ್ನು ಗಮನಿಸಬೇಕು.

ನಮ್ಮನ್ನೆದುರಿಸುತ್ತಿರುವುದು ಗುಂಡೂರಾಯರೋ? ಅಥವಾ ದೇವರಾಜ್ ಅರಸರೋ? ಎಂಬ ಪ್ರಶ್ನೆಯಲ್ಲ, ಬಂಡವಾಳಶಾಹಿ ಧೋರಣೆಯ ವಿರೋಧವಾಗಿ ಕರ್ನಾಟಕ ಪ್ರಗತಿಪರ ಜನತಂತ್ರರಂಗದ ಧೋರಣೆಗಳು ಆಗಬೇಕೆನ್ನುವುದೇ ನಮ್ಮೆದುರಿಗಿರುವ ಸಮಸ್ಯೆ. ಮುಂದೆ ಆಡಳಿತ ನಡೆಸುವವರು ಯಾರೇ ಆಗಲಿ, ಸೆಪ್ಟೆಂಬರ್ 27, 28ರಂದು ಆರು ಪಕ್ಷಗಳು ಸಮಾವೇಶಗೊಂಡು ಸ್ವೀಕರಿಸಿದ ನಿರ್ಣಯಕ್ಕನುಗುಣವಾಗಿ ಆಡಳಿತ ನಡೆಯುತ್ತಿರುವುದೋ ಇಲ್ಲವೋ ಎಂಬುದನ್ನು ಜನತೆ ಎಚ್ಚರದಿಂದ ಗಮನಿಸಬೇಕು.

ಜನಪರವಾದ ಧೋರಣೆಗಳಿಂದ ದೂರ ಹೋಗದಂತೆ ಆಡಳಿತ ನಡೆಸುವವರನ್ನು ಒತ್ತಾಯಿಸಲು, ಜನರ ಸಂಘಟನೆ ಮತ್ತು ಹೋರಾಟ ಹೆಚ್ಚುಹೆಚ್ಚು ಬೆಳೆದುಬರಬೇಕು.

ಈಗ ಜನತಂತ್ರರಂಗ, ಈ ಹೋರಾಟಗಳನ್ನು ಹೆಚ್ಚಿಸುವ ಕಾರ್ಯಕ್ರಮ ಹಾಕಿಕೊಂಡು ಈ ಹೋರಾಟಗಳ ಹಿಂದೆಯೇ ರೈತರ, ಕಾರ್ಮಿಕರ, ವಿದ್ಯಾರ್ಥಿ-ಯುವಜನರ, ಮಹಿಳೆಯರ, ಬುದ್ಧಿಜೀವಿಗಳ ಮತ್ತಿತರ ವರ್ಗಗಳ ಸಂಘಟನೆಗಳನ್ನು ಬಲಿಷ್ಠಗೊಳಿಸಿ, ಹೋರಾಟಕ್ಕೆ ಅಣಿಗೊಳಿಸಿ, ಈ ಹೋರಾಟಗಳಿಗೆ ನಮ್ಮ ಮತ್ತಿತರ ಮಿತ್ರಪಕ್ಷಗಳು ಪೂರಕವಾಗಿ ನಿಲ್ಲುವಂತೆ ಮಾಡುವುದೇ ನಮ್ಮ ಕರ್ತವ್ಯವಾಗಿದೆ. ಅದಕ್ಕೆ ಮುನ್ನಡೆಯೋಣ.

○

ಭ್ರಷ್ಟ ಪ್ರಿನ್ಸಿಪಾಲರ ವಿರುದ್ಧ ಚಳುವಳಿ

ಧಾರವಾಡ ಜಿಲ್ಲೆಯ ಹೊಳೆ ಆಲೂರಿನಲ್ಲಿ ಕಾಲೇಜಿನ ಪ್ರಿನ್ಸಿಪಾಲರ ಅನ್ಯಾಯ ಅಕ್ರಮಗಳ ವಿರುದ್ಧ ವಿದ್ಯಾರ್ಥಿಗಳು ಎಸ್. ಎಫ್. ಐ.ನ ನೇತೃತ್ವದಲ್ಲಿ ಚಳುವಳಿ ಹೂಡಿದ್ದಾರೆ. ಹಾಸ್ಟೆಲ್‌ನ ದುಡ್ಡು ಎತ್ತಿಹಾಕಿದ, ವಿದ್ಯಾರ್ಥಿಗಳ ಜಾತಿ ಹೆಸರಿಸಿ ದೂಷಿಸುವುದು ಇತ್ಯಾದಿ ಆರೋಪಗಳು ಇವರ ಮೇಲಿವೆ.

ಈ ಗುರುತರ ಆಪಾದನೆಗಳನ್ನು ವಿಚಾರಿಸಲು ಈ ಹಿಂದೆಯೇ ಮೇಲಾಧಿಕಾರಿಗಳು ವಿಚಾರಣೆಮಾಡಿ, ಆ ಸಂದರ್ಭದಲ್ಲಿ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಪ್ರಿನ್ಸಿಪಾಲರನ್ನು ಕಿತ್ತಿಹಾಕುವ ನಿರ್ಣಯ ಕೈಕೊಳ್ಳಲಾಗಿತ್ತು. ಆದರೆ ಆಡಳಿತ ಮಂಡಳಿಯ ಛೇರ್‌ಮನ್‌ರು ಈ ನಿರ್ಣಯ ಕಾರ್ಯಗತವಾಗದಂತೆ ನೋಡಿಕೊಂಡರು. ಕಾರಣ ಅನಿವಾರ್ಯವಾಗಿ ವಿದ್ಯಾರ್ಥಿಗಳು ಹೋರಾಟಕ್ಕಿಳಿಯಬೇಕಾಯಿತು. 22-1-80ರಿಂದ ಕ್ಲಾಸ್‌ಗಳಿಗೆ ಬಹಿಷ್ಕಾರ ಹಾಕಲಾಗಿದೆ. 30-1-81ರಿಂದ 24 ತಾಸುಗಳು ಸರದಿ ಅನ್ನ ಸತ್ಯಾಗ್ರಹ ನಡೆದಿದೆ. ಅಂದು ಎಸ್.ಎಫ್.ಐ.ನ ರಾಜ್ಯ ಮಂಡಳಿಯ ಉಪಾಧ್ಯಕ್ಷ ರುದ್ರಪ್ಪ ಕಾಯಿ, ಧಾರವಾಡ ಜಿಲ್ಲಾ ಮಂಡಳಿಯ ಅಧ್ಯಕ್ಷೆ ಉಷಾ, ಉಪಾಧ್ಯಕ್ಷ ಎ.ಪಿ. ಪಾಟೀಲ ಕಾರ್ಯದರ್ಶಿ ವಿ. ಆರ್. ರೆಡ್ಡಿ ಇವರು ಪಾಲುಗೊಂಡಿದ್ದರು. 3-2-81 ರಂದು ಹೊಳೆಆಲೂರಿನ ಎಸ್. ಎಫ್. ಐ. ಘಟಕದ ನಾಯಕರು, ಶಿಕ್ಷಕರು ಹಾಗೂ ಊರಿನ ಗಣ್ಯರಿಂದೊಡಗೂಡಿದ ಹೋರಾಟ ಸಮಿತಿ ರಚಿಸಿಕೊಂಡು ಹೋರಾಟ ಮುಂದುವರೆಸಿದೆ.

○

ಎಸ್.ಎಫ್.ಐ. ಬೆಂಬಲ

ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಬದಿಗೆ ತಳ್ಳಿ ಜೀವ ವಿಮಾ ನೌಕರರ ವೇತನ ಹಾಗೂ ಬೋನಸ್ ಹಕ್ಕುಗಳನ್ನು ಪರಿಷ್ಕರಿಸದಂತೆ ಹೊರಡಿಸಲಾಗಿರುವ ಸುಗ್ರೀವಾಜ್ಞೆಯು ಕಾರ್ಮಿಕ ವರ್ಗದ ಹಕ್ಕು ಬಾಧ್ಯತೆಗಳನ್ನು ಮೊಟಕುಗೊಳಿಸುವ ಕ್ರೂರ ಕ್ರಮವಾಗಿದೆ. ಶ್ರಮಜೀವಿ ವರ್ಗದ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಕ್ರೂರವಾಗಿ ಮರ್ಧಿಸುವ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಆಡಳಿತ ವೈಖರಿಗೆ ಇದೊಂದು ನಿದರ್ಶನ. ಜೀವ ವಿಮಾ ನೌಕರರ ಹೋರಾಟಕ್ಕೆ ಎಸ್.ಎಫ್.ಐ. ಬೆಂಬಲ ನೀಡುತ್ತದೆ.

ಕರ್ನಾಟಕದಾದ್ಯಂತ ಕಳೆದ ಹಲವಾರು ದಿನಗಳಿಂದ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಕಿರಿಯ ವೈದ್ಯರುಗಳು ನಡೆಸುತ್ತಿರುವ ಮುಷ್ಕರಕ್ಕೆ ಎಸ್.ಎಫ್.ಐ. ಬೆಂಬಲ ನೀಡುತ್ತದೆ. ಇವರ ನ್ಯಾಯ ಪೂರ್ಣವಾದ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ಸರ್ಕಾರವನ್ನು ಎಸ್.ಎಫ್.ಐ. ಒತ್ತಾಯಿಸುತ್ತದೆ. ಕ್ಯಾಪಿಟೇಷನ್ ಫೀ, ಡೊನೇಷನ್ ಆಧಾರದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಆರಂಭಿಸಲು ಸರ್ಕಾರ ಪರವಾನಿಗೆ ನೀಡಕೂಡದು. ದೇಶದ ಹಳ್ಳಿ ಗಾಡುಗಳಲ್ಲಿ ವೈದ್ಯರುಗಳ ಮತ್ತು ವೈದ್ಯಕೀಯ ಸವಲತ್ತುಗಳ ಅಗತ್ಯತೆ ಬಹಳವಿದ್ದು ಸರ್ಕಾರವೇ ಹೊಸ ಮೆಡಿಕಲ್ ಕಾಲೇಜುಗಳನ್ನು ಆರಂಭಿಸುವ ಮೂಲಕ ಮೆಡಿಕಲ್ ಕಾಲೇಜಿನ ಹೆಸರಿನಲ್ಲಿ ಹೆಸರಿನಲ್ಲಿ ನಡೆಯುತ್ತಿರುವ 'ವ್ಯಾಪಾರ' ವನ್ನು ಕೊನೆಗೊಳಿಸಬೇಕು ಎಂದು ರಾಜ್ಯ ಎಸ್.ಎಫ್.ಐ. ಘಟಕದ ಅಧ್ಯಕ್ಷ ಕಾಂ. ಆರ್. ಜಯಕುಮಾರ್ ಒತ್ತಾಯಿಸಿದ್ದಾರೆ.

○

ಸ್ವಾಗತ-ಸಮಿತಿ ರಚನೆ

ಮಾರ್ಚ 5,6,7, ಮತ್ತು 8, 1981ರಂದು ಹರಿಹರದಲ್ಲಿ ಸಿ.ಐ.ಟಿ.ಯು.ವಿನ ಮೂರನೇ ರಾಜ್ಯ ಸಮ್ಮೇಳನ ನಡೆಯಲಿದ್ದು, ಈ ಬಗ್ಗೆ ಸ್ವಾಗತಸಮಿತಿ ರಚಿಸಲಾಗಿದೆ. ಸಮ್ಮೇಳನದ ಸಿದ್ಧತೆ ಭರದಿಂದ ನಡೆಯುತ್ತಿದೆ. ಹಣ, ಧವಸ-ಧಾನ್ಯ ಸಂಗ್ರಹವೂ ಜೋರಾಗಿ ನಡೆದಿದೆ. ಕಾಂ. ಇಕ್ಬಾಲ್ ಹುಸೇನರನ್ನು ಸ್ವಾಗತ ಸಮಿತಿಯ ಸಂಚಾಲಕರಾಗಿ ಆಯ್ಕೆ ಮಾಡಲಾಗಿದ್ದು ಸಮ್ಮೇಳನ ಯಶಸ್ಸಿಗೆ ಹರಿಹರದ ಕಾರ್ಮಿಕರು ಶ್ರಮಿಸುತ್ತಿದ್ದಾರೆ.

●

ಶ್ರದ್ಧಾಂಜಲಿ

7-2-81ರಂದು ಬೆಂಗಳೂರಿನಲ್ಲಿ ಸರ್ಕಸ್ ಡೇರೆಗೆ ಬೆಂಕಿಬಿದ್ದು ಅನೇಕ ಜನರು ನಿಧನರಾಗಿರುವುದಲ್ಲದೇ, ನೂರಾರು ಜನರು ಗಾಯಗೊಂಡಿದ್ದಾರೆ. ನಿಧನರಾದವರಲ್ಲಿ ಹೆಚ್ಚಿನವರು ಮಕ್ಕಳು.

ಈ ಭೀಕರ ಬೆಂಕಿ ಅಪಘಾತದಲ್ಲಿ ಮಡಿದವರಿಗೆ ಐಕ್ಯರಂಗವು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ಯೋಗ್ಯವಲ್ಲದ ಸ್ಥಳದಲ್ಲಿ ಸರ್ಕಸ್‌ಗೆ ಲೈಸನ್ಸ ಕೊಟ್ಟಿರುವುದೂ ವಿವಾದಕ್ಕೊಳಗಾದ ವಿಷಯವಾಗಿದೆ. ಈ ಬಗ್ಗೆ ತೀವ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕೆಂದೂ, ನೊಂದವರಿಗೆ ಸೂಕ್ತ ಪರಿಹಾರ ಕೊಡಬೇಕೆಂದೂ ನಾವು ಒತ್ತಾಯಿಸುತ್ತೇವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯೂ, ರಾಷ್ಟ್ರವನ್ನು ತಲ್ಲಣಗೊಳಿಸಿದ ಈ ದುರಂತದಲ್ಲಿ ಮಡಿದವರಿಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ.

●

ಕೃತಜ್ಞತೆಗಳು

8-2-81ರ ಐಕ್ಯರಂಗ ಸಂಚಿಕೆಯನ್ನು ರೈತರ ವಿಶೇಷಾಂಕವಾಗಿ ಹೊರತರಲಾಗಿತ್ತು. ಈ ವಿಶೇಷಾಂಕವನ್ನು ಶ್ಲಾಘಿಸಿ ಅನೇಕ ಪತ್ರಗಳು ಬಂದಿವೆ. ಈ ಸಂದರ್ಭೋಚಿತ ಸಂಚಿಕೆ ತರುವಲ್ಲಿ ಸಹಾಯಕರಾದ ವಿರಾಜ, ವೇದ್, ಪೂರ್ಣಿಮಾ, ಉಮಾ, ಎ. ಎಸ್.ಎ. ಮತ್ತು ಅಂದವಾದ ಮುಖಪುಟ ಚಿತ್ರಿಸಿಕೊಟ್ಟ ದಾವಣಗೇರೆಯ ರೇವನ್ ಇವರಿಗೆಲ್ಲ ಐಕ್ಯರಂಗ ಸಂಪಾದಕ ಮಂಡಳಿ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅಲ್ಲದೇ ವೇಳೆಗೆ ಸರಿಯಾಗಿ ಪತ್ರಿಕೆ ಹೊರಬರುವಲ್ಲಿ ಸಹಕರಿಸಿದ ನೂತನ ಪ್ರಿಟಿಂಗ್ ಪ್ರೆಸ್‌ನ ಕೆಲಸಗಾರರ ಬಾಂಧವರಿಗೆ ಮತ್ತು ಆದರಣೀಯ ಸ್ವಾಗತವನ್ನಿತ್ತ ಓದುಗರಿಗೆ ಧನ್ಯವಾದಗಳು.

ಸಂಪಾದಕ-ಮಂಡಳಿ
ಐಕ್ಯರಂಗ

ಗಮನಿಸಿ

ಅಖಿಲಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಪರವಾಗಿ ದೆಹಲಿಯಿಂದ "ವಾಯಿಸ್ ಆಪ್ ದಿ ವರ್ಕಿಂಗ್ ವುಮನ್" ಎಂಬ ಮಾಸಿಕವೊಂದನ್ನು ಹೊರತರಲಾಗಿದೆ. ವಿವಿಧ ರೀತಿಯಲ್ಲಿ ಶೋಷಣೆಗೊಳಗಾಗಿ, ಇದೀಗ ಸಂಘಟನೆಯಾಗುತ್ತಿರುವ ಮಹಿಳೆಯರ ಹೋರಾಟಕ್ಕೆ ಒಂದು ರೂಪ ಕೊಡಲು ಅನುವಾಗುವಂತೆ ಈ ಮಾಸಿಕ ಶ್ರಮಿಸುತ್ತದೆ. ಜನವರಿಯಿಂದ ಪ್ರಾರಂಭವಾಗಿರುವ ಮಾಸಿಕದ ಬೆಲೆ 50 ಪೈಸೆ. ಈ ಬಗ್ಗೆ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿ ಕೋರಿಕೆ.

CITU Office
6, Talkatora Road
New Delhi-110 001

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT